ಘಟಕ ಹೆಸರು:-೧ ನನ್ನ ದೇಶ ನನ್ನ ಜನ . ಘಟಕ ಯೋಜನೆ ಸಾಮರ್ಥ್ಯಗಳು :-೧) ಆಲಿಸುವಿಕೆ :-ಸರಳ ಮಾಹಿತಿ ಗ್ರಹಿಸುವುದು ಮತ್ತು ಸರಳ ಪ್ರಶ್ನೆಗಳಿಗೆ ಉತ್ತರಿಸುವುದು. (೨) ಬರಹ:-ಸರಳ ಸೂಚನೆ ಅನುಸರಿಸಿ ಬರೆಯುವುದು. -ವರ್ಗ :-೫.

ವಿಷಯ :-ಕನ್ನಡ

ದಿನಾಂಕ :-. .

| ಕಲಿಕೆಯ ಹಂತಗಳು. | ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು. | ಭೋಧನಾ ಕಲಿಕೋಪಕರಣಗಳು. | ಮೌಲ್ಯಮಾಪನದ ಸಾಧನ - ತಂತ್ರಗಳು. | ಶಿಕ್ಷಕರ. ಸ್ವ- ಅವಲೋಕನ | ಅವಧಿ |
|---|---|---|---|---|---|
| 1.ತೊಡಗಿಸಿಕೊಳ್ಳುವಿಕೆ Engage . | ಪೂರ್ವ ಸಿದ್ಧತೆ/ ಪೂರಕ ಚಟುವಟಿಕೆ. ಶಿಕ್ಷಕರು ಮಕ್ಕಳಿಗೆ ವೃತ್ತಾಕಾರವಾಗಿ ನಿಲ್ಲಿಸಿ "ಈ ಮಣ್ಣು ನಮ್ಮದು ಎಂಬ ಪದ್ಯವನ್ನು ಹಾವ- ಭಾವ-ಅಭಿನಯದ ಮೂಲಕ ಹಾಡಿ ಮಕ್ಕಳಿಂದ ಹಾಡಿಸುವರು. | ಹಾಡಿನ ಸಂಗ್ರಹ | ತಂತ್ರ :-ಅಭಿವ್ಯಕ್ತಿ ಸಾಧನ :- ಹಾಡು ಹಾಡುವುದು. | ಎಲ್ಲ ವಿದ್ಯಾರ್ಥಿಗಳು ಈ ಚಟುವಟಿಕೆಗೆ ಭಾಗವಹಿಸಿದ್ದಾರೇ? | |
| 2. ಪತ್ತೆ ಹಚ್ಚುವಿಕೆ Explore | ಶಿಕ್ಷಕರು ಮಕ್ಕಳಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು. ( ೧) ನಮ್ಮ ದೇಶ ಯಾವುದು ? ( ೨) ನಮ್ಮ ದೇಶವನ್ನು ಯಾವ ಯಾವ ಹೆಸರಿನಿಂದ ಕರೆಯುತ್ತಾರೆ ? . (೩) ನಮ್ಮ ದೇಶವನ್ನು ಬ್ರಿಟಿಷರಿಂದ ಸ್ವಾತಂತ್ರ್ಯ ಗೊಳಿಸಲು ಹೋರಾಡಿದವರ ಹೆಸರು ಹೇಳಿರಿ. ಹಾಗಾದರೆ ಇಂದು ನಾವು"ನನ್ನ ದೇಶ ನನ್ನ ಜನ" ಎಂಬ ಪಾಠವನ್ನು ಅಭ್ಯಾಸ ಮಾಡೋಣ. | ಪ್ರಶ್ನಾವಳಿ | ತಂತ್ರ:-ಮೌಖಿಕ ಅಭಿವ್ಯಕ್ತಿ. ಸಾಧನ:-ಮೌಖಿಕ ಪ್ರಶ್ನೆಗಳು. | ನಾನು ಕೇಳುವ ಪ್ರಶ್ನೆಗಳು ಮಕ್ಕಳಿಗೆ ತಿಳಿಯಿತೇ. | |
| 3.ವಿವರಣೆ/ವ್ಯಕ್ತಪಡಿಸುವಿಕೆ. Explain/Express . | ಶಿಕ್ಷಕರ ಮಾದರಿ ವಾಚನ. ನಮ್ಮ ದೇಶ ಭಾರತ ---------ಈ ನಾಡಿನ ಆಧಾರ ಸ್ತಂಭಗಳು ಈ ಪಾಠವನ್ನು ಶಿಕ್ಷಕರು ಸೂಕ್ತ ಸ್ವರಭಾರ ನಿಲುಗಡೆ, ಉಚ್ಚಾರಣೆ ಹಾಗೂ ಧ್ವನಿ ಏರಿಳಿತದೊಂದಿಗೆ ಗಟ್ಟಿಯಾಗಿ ಓದುವರು. ಮಕ್ಕಳು ಮಾದರಿ ವಾಚನವನ್ನು ಆಲಿಸುವರು. ಪದಗಳ ಪರಿಚಯ :- ಶಿಕ್ಷಕರು ಕೆಳಗಿನ ಪದಗಳ ಅರ್ಥವನ್ನು ಕಾಗದದ ಬೆಂಡಿನ ಮೇಲೆ ಬರೆದು ಅರ್ಥೈಸುವರು.ಉದಾ:-ಕರಾವಳಿ -ಸಮುದ್ರದ ದಂಡೆ.ನಾಡು -ದೇಶ. ಬಾವುಟ-ಧ್ವಜ, ಪುರಾತನ-ಹಳೆಯ, ಬಹು-ಅಧಿಕ. ವಿದ್ಯಾರ್ಥಿಗಳಿಂದ ಮೌನ ಓದು ಶಿಕ್ಷಕರು ಮಕ್ಕಳಿಗೆ ಈ | ಪಠ್ಯಪುಸ್ತಕ<br><br>ಶಬ್ದಕೋಶ, ಕರಿಹಲಿಗೆ. | ತಂತ್ರ:-ಓದಿ ಗ್ರಹಿಸುವ.ಮೌಲ್ಯಮಾಪನ<br><br>ತಂತ್ರ:- ಬರಹ. ಸಾಧನ:- ಶಬ್ದಾರ್ಥಗಳು | ಎಷ್ಟು ಮಕ್ಕಳು ಮಾದರಿ ಪಾಠವನ್ನು ಆಸಕ್ತಿಯಿಂದ ಆಲಿಸಿದರು?<br><br>ಎಲ್ಲ ಮಕ್ಕಳು ಹೊಸ ಪದಗಳ ಅರ್ಥ ಗ್ರಹಿಸಿದರೇ? | |

Sirsi Kannada Teachers group(www.studymanzil.com)

| | | | | | |
|---|---|---|---|---|---|
| | ಪಾಠವನ್ನು ಮೌನವಾಗಿ ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹುಡುಕುವಂತೆ ಪ್ರೇರೇಪಿಸುವಯ ೧) ಭಾರತದಲ್ಲಿ ಹರಿಯುವ ಪ್ರಮುಖ ನದಿಗಳಾವುವು ?<br>೨) ಭಾರತದಲ್ಲಿನ ಜನ ಯಾವ ಯಾವ ಭಾಷೆಗಳನ್ನು ಆಡುತ್ತಾರೆ?<br>ಗ್ರಹಣ ಶಕ್ತಿಯ ಪರಿಶೀಲನೆ .<br>ಶಿಕ್ಷಕರು ಮಕ್ಕಳಿಗೆ ದೇಶದ, ನದಿಗಳು,ಕಾಡುಪ್ರಾಣಿಗಳು, ಧ್ವಜದ ಚಿತ್ರಗಳನ್ನು ತೋರಿಸುತ್ತ, ಪ್ರಶ್ನೆಗಳನ್ನು ಕೇಳುತ್ತ ಈ ಪಾಠದಲ್ಲಿನ ವಿಷಯವನ್ನು ವಿವರಿಸುವರು ಕೇವು ಪ್ರಶ್ನೆಗಳನ್ನು ಗುಂಪುಗಳಲ್ಲಿ ಕೊಟ್ಟು ಚರ್ಚಿಸಲು ಹೇಳುವುದು. ೧) ಭಾರತದಲ್ಲಿ ಯಾವ ಯಾವ ಧರ್ಮದ ಜನರಿದ್ದಾರೆ? (೨) ಭಾರತದಲ್ಲಿ ಕಂಡುಬರುವ ಪ್ರಮುಖ ಕಾಡು ಪ್ರಾಣಿಗಳಾವವು?<br>ವ್ಯಾಕರಣ:- ಶಿಕ್ಷಕರು ಮಕ್ಕಳಿಗೆ ಸ್ವರಾಕ್ಷರಗಳು, ಯೋಗವಾಹಗಳು ಮತ್ತು ವ್ಯಂಜನಾಕ್ಷರಗಳ ಬಗ್ಗೆ ವಿವರವಾಗಿ ತಿಳಿಸುವರು. | ಪಠ್ಯಪುಸ್ತಕ<br>ಪಠ್ಯಪುಸ್ತಕ.<br>ಮಿಂಚು ಪಟ್ಟಿಗಳು.<br>ಕರಿ ಹಲಿಗೆ , ಪಠ್ಯಪುಸ್ತಕ ಮಿಂಚು ಪಟ್ಟಿ. | ತಂತ್ರ:-ಓದಿ ಗ್ರಹಿಸುವ ಕೌಶಲದ ಮೌಲ್ಯಮಾಪನ<br>ತಂತ್ರ:ಅವಲೋಕನ.<br>ಸಾಧನ:- ಅವಲೋಕನ ಪಟ್ಟಿ.<br>ತಂತ್ರ:-ಆಲಿಸುವುದು.<br>ಸಾಧನ:-ವ್ಯಾಕರಣ. | ಎಷ್ಟು ವಿದ್ಯಾರ್ಥಿಗಳು ಮೌನವಾಗಿ ಓದುವ ಸಾಮರ್ಥ್ಯ ಗಳಿಸಿದ್ದಾರೇ?<br>ನಾನು ವಿವರಿಸಿದ ವಿದ್ಯಾನದಿಂದ ನನಗೆ ತೃಪ್ತಿ ಇದೆಯೇ?<br>ಎಲ್ಲ ಮಕ್ಕಳು ವ್ಯಾಕರಣವನ್ನು ಸರಿಯಾಗಿ ಅರ್ಥೈಸಿಕೊಂಡರೆ? | |
| 4. ವಿಷಯದ ವಿಸ್ತರಣೆ.<br>Expand. | ವಿದ್ಯಾರ್ಥಿಗಳಿಂದ ಗಟ್ಟಿ ಓದು. ಈ ಪಾಠವನ್ನು ಶಿಕ್ಷಕರು ಸರದಿಯಂತೆ ಎಲ್ಲ ಮಕ್ಕಳಿಂದ ಬೋಧಿಸುವರು. ಚೆನ್ನಾಗಿ ಓದಿದ ಮಕ್ಕಳಿಗೆ ಪ್ರಶಂಸಿಸುವರು. ಓದಲು ತೊಂದರೆ ಅನುಭವಿಸುವವರಿಗೆ ಹಿರೆಮಣಿ ಸಹಾಯದಿಂದ ಸರಿಯಾಗಿ ಓದಲು ರೂಢಿಸುವುದು.<br>ಚಟುವಟಿಕೆ:- ಮಕ್ಕಳಿಗೆ ವೃತ್ರಕಾರವಾಗಿ ಕೂಡ್ರಿಸಿ ಕೆಲವು ಪ್ರಶ್ನೆಗಳನ್ನು ಬರೆದ ಮಿಂಚು ಪಟ್ಟಿ ಮಧ್ಯದಲ್ಲಿಟ್ಟು ಸರದಿಯಂತೆ ಎಲ್ಲ ಮಕ್ಕಳೂ ಒಂದೆಂದು ತೆಗೆದುಕೊಂಡು ಅದರ ಬರೆದ ಪ್ರಶ್ನೆಗೆ ಉತ್ತರಿಸುವ ಚಟುವಟಿಕೆ ಮಾಡಿಸುವರು * ಅಭ್ಯಾಸ ಚಟುವಟಿಕೆ ಮಾಡಿಸುವರು. | ಪಠ್ಯಪುಸ್ತಕ<br>ಪ್ರಶ್ನೆಗಳ ಮಿಂಚುಪಟ್ಟಿಗಳು. | ತಂತ್ರ:-ಗಟ್ಟಿ ಓದು.<br>ಸಾಧನ:-ವ್ಯಯಕ್ತಿಕ ಓದು.<br>ತಂತ್ರ:-ಅಭಿವ್ಯಕ್ತಿ.<br>ಸಾಧನ:-ಪ್ರಶ್ನೆಗಳು | ಎಷ್ಟು ಮಕ್ಕಳು ಪಾಠವನ್ನು ಸರಿಯಾಗಿ ಓದಿದರು ?<br>ಎಷ್ಟು ಮಕ್ಕಳು ಪ್ರಶ್ನೆಗೆ ಸರಿಯಾಗಿ ಉತ್ತರಿಸಿದರು? | |

| | | | | | |
|---|---|---|---|---|---|
| 5. Evaluation<br>ಮೌಲ್ಯಮಾಪನ | ನಿಯೋಜಿತ ಕಾರ್ಯ/ ಮೌಲ್ಯಮಾಪನ<br>ಶಿಕ್ಷಕರು ಮಕ್ಕಳಿಗೆ"ನಮ್ಮ ದೇಶ" ಪ್ರಬಂಧ ಬರೆಯಲು ಸೂಚಿಸುವರು ತಪ್ಪಿದಲ್ಲಿ ಮಾರ್ಗದರ್ಶನ ಮಾಡುವರು.<br>* ಭಾರತದ ನಕ್ಷೆ ಬಿಡಿಸಿಕೊಂಡು ಬರಲು ತಿಳಿಸುವುದು . | ಪಠ್ಯಪುಸ್ತಕ, ನೋಟ್ ಪುಸ್ತಕ | ತಂತ್ರ:-ಬರಹ.<br>ಸಾಧನ:- ಪ್ರಬಂಧ ರಚನೆ | ನಾನು ನನ್ನ ಮುಂದಿನ ಪಾಠವನ್ನು ಹೇಗೆ ಯೋಚಿಸರಿ ? | |

ಘಟಕ ಹೆಸರು:- ೨. ಕನ್ನಡ ನುಡಿ (ಪದ್ಯ) **ಘಟಕ ಯೋಜನೆ** ಸಾಮರ್ಥ್ಯಗಳು :-೧) ಆಲಿಸುವಿಕೆ :-ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸ ಗೀತೆ ಮತ್ತು -

ವರ್ಗ :-೫. ವಿಷಯ :-ಕನ್ನಡ ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥೈಸಿಕೊಳ್ಳುವುದು.

ದಿನಾಂಕ :-. . ೨)ಬರಹ :- ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ನಕಲು ಮಾಡುವುದು * ಸರಳ

** ವಾಕ್ಯಗಳನ್ನು ಬರೆಯುವುದು.

| ಕಲಿಕೆಯ ಹಂತಗಳು. | ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು. | ಬೋಧನಾ ಕಲಿಕೋಪಕರಣಗಳು | ಮೌಲ್ಯಮಾಪನದ ಸಾಧನ - ತಂತ್ರಗಳು | ಶಿಕ್ಷಕರ. ಸ್ವ-ಅವಲೋಕನ | ಅವಧಿ |
|---|---|---|---|---|---|
| 1. ತೊಡಗಿಸಿಕೊಳ್ಳುವುದು.<br>Engage. | ಪೂರ್ವ ಸಿದ್ಧತೆ/ಪೂರಕ ಚಟುವಟಿಕೆ. :-ಶಿಕ್ಷಕರು ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಕನ್ನಡ ನಾಡಿನ ಮಹಿಮೆಯನ್ನು ತಿಳಿಸುವರು ಹುಟ್ಟಿದರೆ ಕನ್ನಡದಲ್ಲಿ ಹುಟ್ಟಬೇಕು'ಎಂಬ ಗೀತೆಯನ್ನು ಹಾವ-ಭಾವ ಅಭಿನಯ ದೊಂದಿಗೆ ಹೇಳಿ ಮಕ್ಕಳಿಂದ ಹೇಳಿಸುವುದು. | ಹಾಡಿನ ಸಂಗ್ರಹ | ತಂತ್ರ:-ಅಭಿವ್ಯಕ್ತಿ<br>ಸಾಧನ :-ಹಾಡು ಹಾಡುವುದು. | ಎಲ್ಲ ಮಕ್ಕಳನ್ನು ನಾನು ಈ ಅವಧಿಯಲ್ಲಿ ತೊಡಗಿಸಿಕೊಂಡದ್ದೇನೆಯೇ? | |

Sirsi Kannada Teachers group(www.studymanzil.com)

| | | | | | |
|---|---|---|---|---|---|
| 2. ಪತ್ತೆ ಹಚ್ಚುವಿಕೆ<br>Explore | ಶಿಕ್ಷಕರು ಮಕ್ಕಳಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು.೧) ನಮ್ಮ ದೇಶ ಯಾವುದು? ನಮ್ಮ ದೇಶದಲ್ಲಿ ಎಷ್ಟು ರಾಜ್ಯಗಳಿವೆ? ನಮ್ಮ ರಾಜ್ಯ ಯಾವುದು? ೨) ನಮ್ಮ ದೇಶದಲ್ಲಿ ಯಾವ ಯಾವ ಭಾಷೆಗಳನ್ನು ಮಾತನಾಡುತ್ತಾರೆ? ಕರ್ನಾಟಕದ ರಾಜ್ಯ ಭಾಷೆ ಯಾವುದು? ಹಾಗಾದರೆ ಇಂದು ನಾವು "ಕನ್ನಡ ನುಡಿ"ಪದ್ಯ ಕಲಿಯೋಣ. | ಪ್ರಶ್ನೆಗಳ ಬ್ಯಾಂಕ್ | ತಂತ್ರ:-ಅಭಿವ್ಯಕ್ತಿ.<br>ಸಾಧನ:- ಮೌಖಿಕ ಪ್ರಶ್ನೆಗಳು | ಎಷ್ಟು ಮಕ್ಕಳು ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿದರು? | |
| 3. ವಿವರಣೆ/ವ್ಯಕ್ತಪಡಿಸುವಿಕೆ<br>Explian/Explore | ಶಿಕ್ಷಕರ ಮಾದರಿ ವಾಚನ (ಗಟ್ಟಿ ಓದು):-ಮಕ್ಕಳು ಬನ್ನಿರಿ, ಮಾತೊಂದು ಹೇಳುವೆ--------------- ನನ್ನಿಯ ಕಥೆಯನು ಬರೆಯುತ್ತ ಈ ಪದ್ಯವನ್ನು ಶಿಕ್ಷಕರು ಸೂಕ್ತ ಸ್ವರ-ಭಾರ , ರಾಗ ಬದ್ಧವಾಗಿ ಹಾವ-ಭಾವದೊಂದಿಗೆ ಹಾಡು ಹೇಳುವರು ಮತ್ತು ಮಕ್ಕಳಿಂದ ಹೇಳಿಸುವರು. ಹೊಸ ಪದಗಳ ಪರಿಚಯ :-ಶಿಕ್ಷಕರು ಈ ಕೆಳಗಿನ ಪದಗಳ ಅರ್ಥವನ್ನು ಕರಿ ಹಲಿಗೆಯ ಮೇಲೆ ಬರೆದು ಅರ್ಥೈಸುವರು. ಉದಾ:- ಅರಿ=ತಿಳಿ, ನುಡಿ=ಭಾಷೆ, ತೊರೆ=ಚಿಕ್ಕ ಹೊಳೆ,ಒಲುಮೆ =ಪ್ರೀತಿ, ತಾಯಿ ನುಡಿ =ಮಾತೃಭಾಷೆ ಇತ್ಯಾದಿ.<br>ಮಕ್ಕಳಿಂದ ಮೌನ ಓದು :- ಶಿಕ್ಷಕರು ಮಕ್ಕಳಿಗೆ ಈ ಪದ್ಯವನ್ನು ಮೌನವಾಗಿ ಓದಿ ಕೆಳಗಿನ ಪ್ರಶ್ನೆ ಗಳಿಗೆ ಉತ್ತರಿಸುವಂತೆ ಪ್ರೇರೇಪಿಸುವರು.೧) ಕನ್ನಡ ನುಡಿಯಲ್ಲಿ ಏನು ತುಂಬಿದೆ? (೨)ಹದಿಬದೆ ಧರ್ಮ ಗ್ರಂಥವನ್ನು ಬರೆದವರು ಯಾರು?<br>ಗ್ರಹಣ ಶಕ್ತಿಯ ಪರಿಶೀಲನೆ:- ಈ ಪದ್ಯವನ್ನು ಶಿಕ್ಷಕರು ಮಕ್ಕಳಿಗೆ ಪ್ರಶ್ನೋತ್ತರ ಪದ್ಧತಿಯ ಮೂಲಕ ವಿವರಿಸುವರು ಮಕ್ಕಳನ್ನು ಗುಂಪುಗಳಲ್ಲಿ ಕುಳಿಸಿ ಕೆಲವು ವಾಕ್ಯಗಳನ್ನು ಕೊಟ್ಟು ಅದರಲ್ಲಿರುವ ದೋಷಯುಕ್ತ ಪದಗಳನ್ನು ಸರಿಪಡಿಸಿ ಬರೆಯಲು ಸೂಚಿಸುವುದು.<br>ವ್ಯಾಕರಣ:-ಶಿಕ್ಷಕರು ಮಕ್ಕಳಿಗೆ ಏಕವಚನ ಮತ್ತು ಬಹುವಚನಗಳ ಬಗ್ಗೆ ವಿವರಿಸುವರು ಉದಾ:- ಗುಡಿಗಳು=ಗುಡಿ.etc | ಪಠ್ಯಪುಸ್ತಕ<br>ಶಬ್ದಕೋಶ, ಕರಿ ಹಲಿಗೆ<br>ಪಠ್ಯಪುಸ್ತಕ<br>ಪಠ್ಯ ಪುಸ್ತಕ. ಕರಿ ಹಲಿಗೆ<br>ಕರಿ ಹಲಿಗೆ<br>ಚಿತ್ರ ಪಟ ಮತ್ತು ಪ್ರಾತ್ಯಕ್ಷಿತೆ | ಓದಿ ಗ್ರಹಿಸುವ ಕೌಶಲದ ಮೌಲ್ಯಮಾಪನ<br>ತಂತ್ರ:-ಬರಹ.<br>ಸಾಧನ:-ಶಬ್ದಾರ್ಥಗಳು<br>ಓದಿ ಗ್ರಹಿಸುವ ಕೌಶಲದ ಮೌಲ್ಯಮಾಪನ<br>ತಂತ್ರ:-ಅವಲೋಕನ.<br>ಸಾಧನ:- ಅವಲೋಕನ ಪಟ್ಟಿ .<br>ತಂತ್ರ:- ಆಲಿಸುವುದು<br>ಸಾಧನ:-ವಚನಗಳು | ಎಲ್ಲ ಮಕ್ಕಳು ಶಿಕ್ಷಕರು ಹಾಡಿದಂತೆ ಹಾಡಿದರೇ?<br>ಎಲ್ಲ ಮಕ್ಕಳು ಪದಗಳ ಅರ್ಥವನ್ನು ಗ್ರಹಿಸಿದರೇ?<br>ಎಷ್ಟು ಮಕ್ಕಳು ಪದ್ಯವನ್ನು ಮೌನವಾಗಿ ಓದಿ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯ ಪಡೆದಿದ್ದಾರೇ?<br>ನಾನು ಪದ್ಯ ವಿವರಿಸಿದ ವಿಧಾನ ಸಮಂಜಸವಾಗಿದೆಯೇ?<br>ಎಷ್ಟು ಮಕ್ಕಳು ವ್ಯಾಕರಣ ಅರಿಯುವಲ್ಲಿ ಕಷ್ಟ ಪಟ್ಟುರು? | |

| | | | | | |
|---|---|---|---|---|---|
| 4. ವಿಷಯದ ವಿಸ್ತರಣೆ<br>Expand. | ವಿದ್ಯಾರ್ಥಿಗಳಿಂದ ಗಟ್ಟಿ ಗಾಯನ :- ಶಿಕ್ಷಕರು ಎರಡು ಗುಂಪು ಮಾಡಿ, ಮೊದಲನೇ ಗುಂಪು ಪದ್ಯದ ಮೊದಲ ಸಾಲು ಹಾಡುವುದು. ಎರಡನೆ ಗುಂಪು ಪದ್ಯದ ಎರಡನೇ ಸಾಲು ಹಾಡುವುದು ನಂತರ ಪ್ರತಿ ಗುಂಪು ಒಂದೊಂದು ನುಡಿಯನ್ನು, ಆಮೇಲೆ ಪ್ರತಿ ಗುಂಪು ಪೂರ್ಣ ಪದ್ಯವನ್ನು ಹಾಡುವಂತೆ ಪ್ರೋತ್ಸಾಹಿಸುವುದು.<br>ಚಟುವಟಿಕೆ:- ಶಿಕ್ಷಕರು ಮಕ್ಕಳಿಗೆ ಪುಣ್ಯಕೋಟಿಯ ಕಥೆಯನ್ನು ಹೇಳುವರು ನಂತರ ಸುಳಿವು ಪದಗಳನ್ನು ಕೊಟ್ಟು ಪದ್ಯ ರಚಿಸುವ ಚಟುವಟಿಗೆ ಮಾಡಿಸುವರು. *ಅಭ್ಯಾಸ ಚಟುವಟಿಕೆ ಮಾಡಿಸುವರು.*ಗುಣಿತಾಕ್ಷರ ಮತ್ತು ಒತ್ತಕ್ಷರ ಪದಗಳನ್ನು ಗುಂಡಾಗಿ ನಕಲು ಮಾಡಲು ಸೂಚಿಸುವರು. | ಪಠ್ಯಪುಸ್ತಕ<br>ಪಠ್ಯ ಪುಸ್ತಕ.<br>ನೋಟ್ ಪುಸ್ತಕ | ತಂತ್ರ:- ಗಟ್ಟಿ ಓದು.<br>ಸಾಧನ:- ಪದ್ಯ<br>ತಂತ್ರ:-ಬರಹ.<br>ಸಾಧನ:-ಪದ್ಯ ರಚನೆ | ಯಾವ ಗುಂಪು ಚೆನ್ನಾಗಿ ಹಾಡುವಲ್ಲಿ ಕಷ್ಟ ಪಟ್ಟಿತು?<br>ಎಲ್ಲ ಮಕ್ಕಳು ಕೊಟ್ಟ ಚಟುವಟಿಕೆಯನ್ನು ಸರಿಯಾಗಿ ಮಾಡಿದರೇ? | |
| 5. ಮೌಲ್ಯಮಾಪನ<br>Evaluation . | ನಿಯೋಜಿತ ಕಾರ್ಯ/ಮೌಲ್ಯಮಾಪನ. :-* ಶಿಕ್ಷಕರು ಮಕ್ಕಳಿಗೆ ಈ ಕೆಳಗಿನ ಪದಗಳನ್ನು ಕೊಟ್ಟು ಅವುಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸುವಂತೆ ತಿಳಿಸುವರು. *ಈ ಪದ್ಯವನ್ನು ಕಂಠಪಾಠ ಮಾಡಲು ತಿಳಿಸುವರು | ಪಠ್ಯಪುಸ್ತಕ.<br>ನೋಟ್ ಪುಸ್ತಕ | ತಂತ್ರ:-ಬರಹ ಮತ್ತು ಅಭಿವ್ಯಕ್ತಿ .<br>ಸಾಧನ:- ವ್ಯಾಕ ರಚನೆ ಮತ್ತು ಪದ್ಯ | ನಾನು ಮುಂದಿನ ಪಾಠವನ್ನು ಹೇಗೆ ಆಯೋಜಿಸಲಿ? | |

ಘಟಕ ಹೆಸರು:-೩ ನವಿಲು. **ಘಟಕ ಯೋಜನೆ** ಸಾಮರ್ಥ್ಯಗಳು :-೧) ಓದುವುದು:- ಸರಳ ಮಾಹಿತಿ ಓದುವುದು ಮತ್ತು ಗ್ರಹಿಸುವುದು. -

ವರ್ಗ :-೫. ವಿಷಯ :-ಕನ್ನಡ ೨) ಬರಹ :- ಸರಳ ಕಥೆಗಳನ್ನು ಬರೆಯುವುದು. . ದಿನಾಂಕ :-. .

Sirsi Kannada Teachers group(www.studymanzil.com)

| ಕಲಿಕೆಯ ಹಂತಗಳು. | ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು. | ಭೋಧನಾ ಕಲಿಕೋಪಕರಣಗಳು | ಮೌಲ್ಯಮಾಪನದ ಸಾಧನ - ತಂತ್ರಗಳು. | ಶಿಕ್ಷಕರ. ಸ್ವ-ಅವಲೋಕನ | ಅವಧಿ. |
|---|---|---|---|---|---|
| ೧) ತೊಡಗಿಸಿಕೊಳ್ಳುವಿಕೆ Engage . | ಪೂರ್ವ ಸಿದ್ಧತೆ /ಪೂರಕ ಚಟುವಟಿಕೆ:- ಶಿಕ್ಷಕರು ಮಕ್ಕಳಿಗೆ "ನವಿಲೆ ನವಿಲೆ ನೀಲಿಯ ನವಿಲೆ "ಎಂಬ ಪದ್ಯವನ್ನು ಹಾವ -ಭಾವ ದೊಂದಿಗೆ ಹಾಡಿ ಮಕ್ಕಳಿಂದ ಹಾಡಿಸುವರು. | ಹಾಡಿನ ಸಂಗ್ರಹ | ತಂತ್ರ:-ಅಭಿವ್ಯಕ್ತಿ. ಸಾಧನ:-ಹಾಡು ಹೇಳುವುದು. | ಎಲ್ಲ ಮಕ್ಕಳನ್ನು ನಾನು ಈ ಅವಧಿಯಲ್ಲಿ ಕೊಂಡಿದ್ದೇನೆಯೇ? | |
| ೨) ಪತ್ತೆ ಹಚ್ಚುವಿಕೆ. Explore. | ಶಿಕ್ಷಕರು ಮಕ್ಕಳಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು.1) ನೀವು ಯಾವ ಯಾವ ಪಕ್ಷಿಗಳನ್ನು ನೋಡಿದ್ದೀರಿ? 2) ಚಿತ್ರಗಳನ್ನು ತೋರಿಸುತ್ತಾ ಇದು ಯಾವ ಪಕ್ಷಿ ಎಂದು ಕೇಳುವುದು.3) ಹಸಿರು ಬಣ್ಣ, ಕೆಂಪು ಕೊಕ್ಕು ಇರುವ ಪಕ್ಷಿ ಯಾವುದು? 4) ಪೂರ್ತಿ ಕಪ್ಪಾಗಿರುವ ಪಕ್ಷಿ ಯಾವುದು?5) ಸುಂದರವಾಗಿ ಕುಣಿಯುವ ಪಕ್ಷಿ ಯಾವುದು? ಹಾಗಾದರೆ ಇಂದು ನಾವು"ನವಿಲು"ಎಂಬ ಪಾಠ ಓದೋಣ. | ಪ್ರಶ್ನೆಗಳು ಬ್ಯಾಂಕ್ | ತಂತ್ರ:-ಮೌಖಿಕ ಅಭಿವ್ಯಕ್ತಿ. ಸಾಧನ :- ಮೌಖಿಕ ಪ್ರಶ್ನೆಗಳು . | ನನ್ನ ಪ್ರಶ್ನೆಗೆ ಮಕ್ಕಳು ಸರಿಯಾದ ಉತ್ತರ ನೀಡಿದರೇ? | |
| ೩) ವಿವರಣೆ/ವ್ಯಕ್ತ ಪಡಿಸುವಿಕೆ. Explan / Express | ಶಿಕ್ಷಕರ ಮಾದರಿ ವಾಚನ.:- ಜುಳು ಜುಳು ಹರಿಯುವ ನದಿ------- ಹಾವುಗಳು ಸುಳಿಯಲಾರವು. ಈ ಪಾಠವನ್ನು ಶಿಕ್ಷಕರು ಸೂಕ್ತ ಸ್ವರ- ಭಾರ -ನಿಲುಗಡೆ , ಧ್ವನಿ ಏರಿಳಿತ ದೊಂದಿಗೆ ಗಟ್ಟಿಯಾಗಿ ವಾಚನ ಮಾಡುವರು, ಮಕ್ಕಳು ಆಲಿಸುವರು. ಹೊಸ ಪದಗಳ ಪರಿಚಯ:-ಶಿಕ್ಷಕರು ಈ ಕೆಳಗಿನ ಪದಗಳ ಅರ್ಥವನ್ನು ಕರಿ ಹಲಿಗೆಯ ಮೇಲೆ ಬರೆದು ಅರ್ಥೈಸುವರು. ಉದಾಹರಣೆಗೆ:- ಛಾಯೆ- ನೆರಳು , ನಯನ-ಕಣ್ಣು, ,ಭಾಧೆ-ತೊಂದರೆ, ಆವಾಸ-ಮನೆ, ನರ್ತನ-ಕುಣಿತ, ತುರಾಯಿ-ಹಕ್ಕಿಗಳ ಜುಟ್ಟು. ವಿದ್ಯಾರ್ಥಿಗಳಿಂದ ಮೌನ ಓದು.:-ಶಿಕ್ಷಕರು ಮಕ್ಕಳಿಗೆ ಈ ಪಾಠವನ್ನು ಮೌನವಾಗಿ ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹುಡುಕಿರಿ ಎಂದು ಪ್ರೇರೇಪಿಸುವರು.೧) ನವಿಲಿಗಿರುವ ಇತರ ಹೆಸರುಗಳಾವವು? (೨) ನವಿಲು ಗರಿ ಯಾರ ಜುಟ್ಟಿನ ಅಲಂಕಾರವಾಗಿ ಬಳಕೆಯಾಗಿದೆ ? | ಪಠ್ಯಪುಸ್ತಕ<br>ಶಬ್ದಕೋಶ, ಕರಿ ಹಲಿಗೆ<br>ಪಠ್ಯಪುಸ್ತಕ | ಓದಿ ಗ್ರಹಿಸುವ ಕೌಶಲ್ಯದ ಮೌಲ್ಯಮಾಪನ .<br>ತಂತ್ರ:-ಬರಹ. ಸಾಧನ :- ಶಬ್ದಾರ್ಥಗಳು<br>ಓದಿ ಗ್ರಹಿಸುವ. ಕೌಶಲದ ಮೌಲ್ಯಮಾಪನ. | ಎಷ್ಟು ಮಕ್ಕಳು ಮಾದರಿ ಪಾಠವನ್ನು ಆಸಕ್ತಿಯಿಂದ ಆಲಿಸಿದರು ?<br>ಎಲ್ಲ ಮಕ್ಕಳು ಹೊಸ ಪದಗಳ ಅರ್ಥವನ್ನು ಗ್ರಹಿಸಿದರೇ ?<br>ಎಷ್ಟು ಮಕ್ಕಳು ಮೌನವಾಗಿ ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿದ್ದಾರೇ? | |

| | | | | | |
|---|---|---|---|---|---|
| | ಗ್ರಹಣ ಶಕ್ತಿಯ ಪರಿಶೀಲನೆ. :- ಈ ಪಾಠವನ್ನು ಶಿಕ್ಷಕರು ಚಿತ್ರ ಪಟವನ್ನು ಬಳಸಿ, ಪ್ರಶ್ನೆಗಳನ್ನು ಕೇಳುತ್ತಾ ವಿವರಿಸುವರು.ಮಕ್ಕಳಿಗೆ ಗುಂಪುಗಳಲ್ಲಿ ಕೂಡಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಚರ್ಚಿಸಿ ಬರೆಯಲು ಪ್ರೋತ್ಸಾಹಿಸುವರು. ೧) ನವಿಲು ಎಲ್ಲಿ ವಾಸಿಸುತ್ತದೆ? (೨) ಅದು ಎಷ್ಟು ವರ್ಷ ಜೀವಿಸಬಲ್ಲದು? (೩) ನವಿಲಿಗೆ ಭಾರತದಲ್ಲಿ ಯಾವ ಗೌರವ ಲಭಿಸಿದೆ? (೪) ನವಿಲು ಯಾವ ರೀತಿ ಕುಣಿಯುತ್ತದೆ?<br>ವ್ಯಾಕರಣ :- ಶಿಕ್ಷಕರು ಮಕ್ಕಳಿಗೆ ಗುಣಿತಾಕ್ಷರಗಳ ಬಗ್ಗೆ ಮಿಂಚು ಪಟ್ಟಿ, ಹಾಗೂ ಕರಿಹಲಿಗೆಯ ನ್ನು ಬಳಸಿ ವಿವರಿಸುವರು ಉದಾ:- ಕ್+ಅ=ಕ, ಕ್+ಆ=ಕಾ, ಕ್+ಇ=ಕಿ ಕೇಳಿ ಇತ್ಯಾದಿ. | ಚಿತ್ರಪಟ,.<br>ಪಠ್ಯಪುಸ್ತಕ.<br>ನೋಟ್ ಪುಸ್ತಕ.<br><br>ಮಿಂಚುಪಟ್ಟಿ. . ಕರಿ ಹಲಿಗೆ. | ತಂತ್ರ:- ಅವಲೋಕನ.<br>ಸಾಧನ :- ಅವಲೋಕನ ಪಟ್ಟ.<br><br>ತಂತ್ರ :-ಆಲಿಸುವುದು.<br>ಸಾಧನ:-ಗುಣಿತಾಕ್ಷರ. | ನಾನು ಕಳಿಸಿದ ವಿಧಾನ ಮಕ್ಕಳ ಕಲಿಕೆಗೆ ಅನುಕೂಲವಾಯಿತೇ?<br><br>ಎಲ್ಲ ಮಕ್ಕಳೂ ಗುಣಿತಾಕ್ಷರಗಳನ್ನು ಅರಿತು ಕೊಂಡರೇ? | |
| ೪) ವಿಷಯದ ವಿಸ್ತರಣೆ<br>Expand | ಮಕ್ಕಳಿಂದ ಗಟ್ಟಿ ಓದು:- ಶಿಕ್ಷಕರು ಸರದಿಯಂತೆ ಎಲ್ಲ ಮಕ್ಕಳಿಗೂ ಪಾಠವನ್ನು ಸರಿಯಾಗಿ ಮತ್ತು ಗಟ್ಟಿಯಾಗಿ ಓದುವಂತೆ ಸೂಚಿಸುವರು. ತಪ್ಪಾಗಿ ಓದುವ ಮಕ್ಕಳನ್ನು ಗುರುತಿಸಿ ಹಿರೇಮಣಿ ಸಹಾಯದಿಂದ ಸುಧಾರಿಸಲು ಪ್ರಯತ್ನಿಸುವರು.<br>ಚಟುವಟಿಕೆ:-*ಮಕ್ಕಳಿಗೆ ವೃತ್ತಾಕಾರವಾಗಿ ಕೂಡ್ರಿಸಿ, ಹುಲಿ, ಸಿಂಹ, ಆನೆ,ನವಿಲಿನ ಮಾಹಿತಿ ಇರುವ ಮಿಂಚು ಪಟ್ಟಿಗಳನ್ನು ಕೊಟ್ಟು ಸರದಿಯಂತೆ ಜೋರಾಗಿ ಓದುವಂತೆ ಪ್ರೇರೇಪಿಸುವರು. *ಅಭ್ಯಾಸ ಪುಸ್ತಕದಲ್ಲಿ ಕೊಟ್ಟು ಚೌಕದಲ್ಲಿ ಅಡುಗಿ ಕುಳಿತಿರುವ ಪಕ್ಷಿಗಳನ್ನು ಗುರುತಿಸಿ ಗೆರೆ ಎಳೆಯುವ ಚಟುವಟಿಕೆ ಮಾಡಿಸುವುದು*ಅಭ್ಯಾಸ ಚಟುವಟಿಕೆ ಮಾಡಿಸುವುದು. | ಪಠ್ಯಪುಸ್ತಕ<br><br>ಪ್ರಾಣಿ-ಪಕ್ಷಿಗಳ. ಮಾಹಿತಿ ಇರುವ ಮಿಂಚುಪಟ್ಟಿ, ನೋಟ್ ಪುಸ್ತಕ, ಪಠ್ಯಪುಸ್ತಕ | ತಂತ್ರ:-ಗಟ್ಟಿ ಓದು.<br>ಸಾಧನ:-ವೈಯಕ್ತಿಕ ಓದು.<br><br>ತಂತ್ರ :-ಓದುವುದು ಬರಹ.<br>ಸಾಧನ:-ಮಿಂಚುಪಟ್ಟಿ ಪ್ರಶ್ನೆಗಳು . | ಎಷ್ಟು ಮಕ್ಕಳು ಪಾಠವನ್ನು ತಪ್ಪಿಲ್ಲದಂತೆ ಓದಿದರು? ಮತ್ತು ಎಷ್ಟು ಮಕ್ಕಳು ತಪ್ಪಾಗಿ ಓದಿದರು?<br><br>ಎಷ್ಟು ಮಕ್ಕಳು ಮಿಂಚುಪಟ್ಟಿ ಇರುವ ಮಾಹಿತಿಯನ್ನು ಸರಿಯಾಗಿ ಓದಿದರು ? | |
| ೫) ಮೌಲ್ಯಮಾಪನ<br>Evaluation | ನಿಯೋಜಿತ ಕಾರ್ಯ /ಮೌಲ್ಯಮಾಪನ :-ಶಿಕ್ಷಕರು ಮಕ್ಕಳಿಗೆ "ನವಿಲು"ಟಿಪ್ಪಣಿ ಬರೆಯಿರಿ ಎಂದು ಸೂಚಿಸುವರು ತಪ್ಪಿದಲ್ಲಿ ಬರೆಯುವ ರೀತಿ ಹೇಗೆ ಎಂಬುದನ್ನು ವಿವರಿಸುವರು. | ಪಠ್ಯಪುಸ್ತಕ.<br>ನೋಟ್ ಪುಸ್ತಕ | ತಂತ್ರ :-ಬರಹ.<br>ಸಾಧನ:-ಟಿಪ್ಪಣಿ | ನಾನು ನನ್ನ ಮುಂದಿನ ಪಾಠವನ್ನು ಹೇಗೆ ಆಯೋಜಿಸಲಿ ? | |

ಘಟಕ ಹೆಸರು:-೪ ಗೂಡಿನಿಂದ ಬಾನಿನೆಡೆಗೆ. **ಘಟಕ ಯೋಜನೆ** ಸಾಮರ್ಥ್ಯಗಳು :-೧) ಆಲಿಸುವುದು:-ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ

ವರ್ಗ :- ೫ ವಿಷಯ :- ಕನ್ನಡ . ಪ್ರಾಸ ಗೀತೆ ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥೈಕೊಳ್ಳುವುದು

ದಿನಾಂಕ :-. . ೨) ಮಾತನಾಡುವುದು :-ಜನಪ್ರಿಯ ಪ್ರಾಸ ಗೀತೆಗಳನ್ನು ವೈ ಯಕ್ತಿಕ ವಾಗಿಯೂ.

*. , ಸಾಮೂಹಿಕವಾಗಿಯೂ. ಹಾಡುವುದು .*ಪಠ್ಯದಲ್ಲಿನ ಸರಳ ಮಾಹಿತಿಯನ್ನು *.

ಗ್ರಹಿಸಿ ಯಾರು ? ಯಾವಾಗ ? ಎಲ್ಲಿ ? ಎಂಬ ಪ್ರಶ್ನೆಗಳಿಗೆ ಉತ್ತರಿಸುವರು.

| ಕಲಿಕೆಯ ಹಂತಗಳು. | ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು. | ಭೋಧನಾ ಕಲಿಕೋಪಕರಣಗಳು | ಮೌಲ್ಯಮಾಪನದ ಸಾಧನ - ತಂತ್ರಗಳು | ಶಿಕ್ಷಕರ. ಸ್ವ-ಅವಲೋಕನ | ಅವಧಿ |
|---|---|---|---|---|---|
| ೧)ತೊಡಗಿಸಿಕೊಳ್ಳುವಿಕೆ.<br>Engage. | ಪೂರ್ವ ಸಿದ್ಧತೆ/ಪೂರಕ ಚಟುವಟಿಕೆ .:-ಶಿಕ್ಷಕರು ಮಕ್ಕಳಿಗೆ"ಕಾಗೆ, ಗಿಳಿಮತ್ತು ನವಿಲಿನ ಕಥೆ ಯನ್ನು ಮಿಂಚು ಪಟ್ಟಿಯನ್ನು ತೋರಿಸುವ ಮುಖಾಂತರ ವಿವರಿಸಿ ಕೆಲವು ಪ್ರಶ್ನೆಗಳನ್ನು ಕೇಳುವರು. *ಕಾಗೆಯನ್ನು ಕಂಡರೆ ನವಿಲಿಗೆ ಮತ್ತು ಗಿಳಿಗೆ ಇಷ್ಟವಾಗುತ್ತಿರಲಿಲ್ಲ ಏಕೆ? * ಗಿಳಿಗೆ ಮೈಗೆ ಹುಶಾರಿಲ್ಲದಾಗ ಕಾಗೆ ಏನನ್ನು ತೆಗೆದುಕೊಂಡು ಹೋಯಿತು ? | ಕಥೆಗಳ ಸಂಗ್ರಹ.<br>ಮಿಂಚು ಪಟ್ಟಿಗಳು | ತಂತ್ರ:-ಆಲಿಸುವುದು.<br>ಸಾಧನ:-ಕಥೆ | ಕಥೆಯನ್ನು ಎಲ್ಲ ಮಕ್ಕಳು ಆಸಕ್ತಿಯಿಂದ ಆಲಿಸಿದರೇ? | |
| ೨) ಪತ್ತೆ ಹೆಚ್ಚುವಿಕೆ . | ಶಿಕ್ಷಕರು ಮಕ್ಕಳಿಗೆ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಪಡೆಯುವರು? (೧)ನಾಯಿ, ಬೆಕ್ಕು, ಆಕಳು, ಹುಲಿ ಇವೆಲ್ಲಾ ಏನು? (೨) ಕಾಗೆ, ಗುಬ್ಬಿ, ಗಿಳಿ, ಕೋಗಿಲೆ, ನವಿಲು ಇವೆಲ್ಲ ಏನು? (೩) ನಾವು ನೀವೆಲ್ಲಾ ಯಾರು? ನಾವೆಲ್ಲಾ ಎಲ್ಲಿ ವಾಸಿಸುತ್ತೆವೆ?(೪) ಪಕ್ಷಿಗಳು ಎಲ್ಲಿ ವಾಸಿಸುತ್ತವೆ ? ನೀವು ಗೂಡನ್ನು ನೋಡಿದ್ದೀರಾ? (೫) ಪಕ್ಷಿಗಳು ಎಲ್ಲಿ ಹಾರುತ್ತವೆ? ಆಕಾಶಕ್ಕೆ ಬಾನು ಎನ್ನುತ್ತಾರೆ? ಹಾಗಾದರೆ ಇಂದು ನಾವು"ಗೂಡಿನಿಂದ ಬಾನಿನೆಡೆಗೆ"ಪದ್ಯ ಓದೋಣ. | ಪ್ರಶ್ನೆಗಳ ಸಂಗ್ರಹ | ತಂತ್ರ:-ಮೌಖಿಕ.<br>ಸಾಧನ:-ಮೌಖಿಕ ಪ್ರಶ್ನೆಗಳು. | ಎಲ್ಲಾ ವಿದ್ಯಾರ್ಥಿಗಳು ಚಟುವಟಿಕೆಯೊಂದಿಗೆ ನನ್ನ ತರಗತಿಯಲ್ಲಿ ತೊಡಗಿಸಿಕೊಂಡಿದ್ದಾರೆಯೇ? | |

Sirsi Kannada Teachers group(www.studymanzil.com)

| | | | | | |
|---|---|---|---|---|---|
| ೩) ವಿವರಣೆ/ವ್ಯಕ್ತಪಡಿಸುವಿಕೆ. Explain/express. | ಶಿಕ್ಷಕರಿಂದ ಮಾದರಿ ವಾಚನ.:-ಗೂಡಿನಿಂದ ಬಾನಿನೆಡೆಗೆ------------------ ಬೆಳೆದ ಮೇಲೆ ತಿಳಿವುದಾಗ ಜಗದ ಲೀಲೆಯೂ ಈ ಪದ್ಯವನ್ನು ಶಿಕ್ಷಕರು ಹಾವ-ಭಾವ ಅಭಿನಯದೊಂದಿಗೆ ರಾಗ ಬದ್ಧವಾಗಿ ಹಾಡುವರು ಮತ್ತು ಮಕ್ಕಳಿಂದ ಹಾಡಿಸುವರು. ಹೊಸ ಪದಗಳ ಪರಿಚಯ:- ಶಿಕ್ಷಕರು ಹೊಸ ಪದಗಳ ಪರಿಚಯವನ್ನು ಕರಿ ಹಲಿಗೆಯ ಮೇಲೆ ಬರೆದು ಅರ್ಥೈಸುವರು, ಉದಾ:- ಬಾನು-ಆಕಾಶ, ನಿತ್ಯ-ಪ್ರತಿದಿನ , ಹಿಗ್ಗು-ಸಂತೋಷ, ಜಗ-ಜಗತ್ತು, ತಾಣ-ಜಾಗ, ಲೀಲೆ-ಆಟ ಇತ್ಯಾದಿ.<br>ವಿದ್ಯಾರ್ಥಿಗಳಿಂದ ಮೌನ ಓದು.:- ಶಿಕ್ಷಕರು ಮಕ್ಕಳಿಗೆ ಈ ಪದ್ಯವನ್ನು ಮೌನವಾಗಿ ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹುಡುಕುವಂತೆ ಸೂಚಿಸುವರು. (೧) ಹಕ್ಕಿ ನಿತ್ಯ ಎಲ್ಲಿಗೆ ಹಾರಬೇಕೆಂದು ಯೋಚಿಸಿತು? (೨) ಅಮ್ಮನಿಗೆ ಮರಿಹಕ್ಕಿ ಏನು ಹೇಳಿತು? ಗ್ರಹಣ ಶಕ್ತಿಯ ಪರಿಶೀಲನೆ :- ಶಿಕ್ಷಕರು ಈ ಪದ್ಯವನ್ನು ಹಾವ ಭಾವ ಅಭಿನಯದೊಂದಿಗೆ ಪದ್ಯದ ಭಾವರ್ಥ ವನ್ನು ವಿವರಿಸುವರು.ನಂತರ ಗುಂಪುಗಳಲ್ಲಿ ಕೆಲವು ಪದಗಳನ್ನು ಪದದಿಂದ ವಾಕ್ಯ ರಚಿಸುವ ಚಟುವಟಿಕೆ ಮಾಡಿಸುವರು. ಉದಾಹರಣೆಗೆ:-ಗೂಡು, ಬಾನು, ಹಳ್ಳಕೊಳ್ಳ, ತಾಣ , ಬೆಟ್ಟ ಇತ್ಯಾದಿ.<br>ವ್ಯಾಕರಣ :- ಶಿಕ್ಷಕರು ಮಕ್ಕಳಿಗೆ ವಿರುದ್ಧ ಪದಗಳನ್ನು ಬರೆಯಲು ಕೊಡುವರು, ತಪ್ಪಿದಲ್ಲಿ ತಿದ್ದುವರು, ನಂತರ ಪದಗಳನ್ನು ಬಿಡಿಸುವ ಬಗ್ಗೆ ತಿಳಿಸುವರು.ಉದಾ:- ಬಾನಿನೆಡೆಗೆ =ಬಾನಿನ +ಎಡೆಗೆ, ಮೇಲಕೇರಿ =ಮೇಲಕೆ +ಏರಿ | ಪಠ್ಯಪುಸ್ತಕ<br>ಶಬ್ದಕೋಶ , ಕರಿಹಲಿಗೆ<br>ಪಠ್ಯಪುಸ್ತಕ<br>ಪಠ್ಯಪುಸ್ತಕ<br>ಕರಿ ಹಲಿಗೆ,.<br>ಪಠ್ಯಪುಸ್ತಕ | ಓದಿ ಗ್ರಹಿಸುವ ಕೌಶಲದ ಮೌಲ್ಯಮಾಪನ<br>ತಂತ್ರ:-ಬರಹ. .<br>ಸಾಧನ:-ಶಬ್ದಾರ್ಥಗಳು.<br>ಓದಿ ಗ್ರಹಿಸುವ ಕೌಶಲದ ಮೌಲ್ಯಮಾಪನ<br>ತಂತ್ರ:-ಅವಲೋಕನ.<br>ಸಾಧನ:-ಅವಲೋಕನ ಪಟ್ಟಿ<br>ತಂತ್ರ:-ಬರಹ.<br>ಸಾಧನ:-ವ್ಯಾಕರಣ | ಎಲ್ಲ ವಿದ್ಯಾರ್ಥಿಗಳು ಈ ಹಾಡನ್ನು ಶಿಕ್ಷಕರು ಹೇಳಿದಂತೆಯೇ ಹಾಡಿದರೇ?<br>ಎಲ್ಲ ಮಕ್ಕಳು ಪದಗಳ ಅರ್ಥವನ್ನು ಗ್ರಹಿಸಿದರೇ?<br>ಎಷ್ಟು ವಿದ್ಯಾರ್ಥಿಗಳ ಮೌನವಾಗಿ ಓದುವಲ್ಲಿ ತೊಂದರೆ ಅನುಭವಿಸಿದರು?<br>ನಾನು ಅಳವಡಿಸಿಕೊಂಡರು ವಿಧಾನ ಸರಿ ಇದೆಯೇ?<br>ಎಷ್ಟು ಮಕ್ಕಳು ವ್ಯಾಕರಣ ಅರಿಯುವಲ್ಲಿ ತೊಂದರೆ ಅನುಭವಿಸಿದರು? | |
| ವಿಷಯದ ವಿಸ್ತರಣೆ Expand | ಮಕ್ಕಳಿಂದ ಗಟ್ಟಿ ಗಾಯನ :- ಶಿಕ್ಷಕರು ಈ ಪದ್ಯದ ತುಣುಕುಗಳನ್ನು ಮಿಂಚುಪಟ್ಟಿಯಲ್ಲಿ ಬರೆದು ಮಧ್ಯದಲ್ಲಿಟ್ಟು ಮಕ್ಕಳನ್ನು ವೃತ್ತಾಕಾರವಾಗಿ ಕೂಡ್ರಿಸಿ ಸರದಿಯಂತೆ ಒಂದೊಂದು ಮಿಂಚು ಪಟ್ಟಿಯನ್ನು ತೆಗೆದುಕೊಂಡು ಗಟ್ಟಿಯಾಗಿ | ಪದ್ಯದ ತುಣುಕಿನ.<br>ಮಿಂಚುಪಟ್ಟಿಗಳು. | ತಂತ್ರ:-ಅಭಿವ್ಯಕ್ತಿ.<br>ಸಾಧನ :-ಪದ್ಯ | ಎಷ್ಟು ಮಕ್ಕಳು ಪದ್ಯವನ್ನು ಸರಿಯಾಗಿ ಹೇಳಿದರು.? | |

| | | | | | |
|---|---|---|---|---|---|
| | ಹೇಳುವ ಚಟುವಟಿಕೆ ಮಾಡಿಸುವರು ನಂತರ ಗುಂಪುಗಳಲ್ಲಿ ಕೂಡ್ರಿಸಿ ಪದ್ಯವನ್ನು ಹಾಡಿಸುವರು. ಚಟುವಟಿಕೆ :-. ಗುಂಪುಗಳಲ್ಲಿ ಕೆಲವು ಪ್ರಶ್ನೆಗಳನ್ನು ಕೊಟ್ಟು ಚರ್ಚಿಸಿ ಉತ್ತರ ಬರೆಯುವ ಚಟುವಟಿಕೆ ಮಾಡಿಸುವರು ೧) ಹಕ್ಕಿ ನಿತ್ಯ ಬಾನಿಗೆ ಹಾರಬೇಕೆಂದು ಏಕೆ ಯೋಚಿಸಿತು? ೨) ಗೂಡಿನಾಚೆಗೆ ಇರುವ ಚಂದವನ್ನು ಕಂಡು ಹಕ್ಕಿ ಹೇಗೆ ಹಿಗ್ಗಿತ್ತು? *ಅಭ್ಯಾಸ ಚಟುವಟಿಕೆ ಮಾಡಿಸುವುದು. | | ತಂತ್ರ:-ಬರಹ.<br>ಸಾಧನ:-ಪ್ರಶ್ನೆಗಳು. | ಯಾವ ಗುಂಪು ಉತ್ತರ ಬರೆಯುವಲ್ಲಿ ಕಷ್ಟ ಪಟ್ಟಿತೇ? | |
| ಮೌಲ್ಯಮಾಪನ.<br>Evaluation | ನಿಯೋಜಿತ ಕಾರ್ಯ/ಮೌಲ್ಯಮಾಪನ. :-. * ಪದ್ಯವನ್ನು ವ್ಯಯಕ್ತಿಕವಾಗಿ ಹಾಡಿಸುವುದು. * ಪೂರಕ ಓದಿನ ಪದ್ಯವನ್ನು ಓದಿಸುವುದು. | ಪಠ್ಯಪುಸ್ತಕ | ತಂತ್ರ:- ಅಭಿವ್ಯಕ್ತಿ.<br>ಸಾಧನ:-ಪದ್ಯ | ನಾನು ನನ್ನ ಮುಂದಿನ ಪಾಠವನ್ನು ಹೇಗೆ ಯೋಜಸಲಿ? | |

**ಘಟಕದ ಹೆಸರು:-೫ ಹಸ್ತ ರೇಖೆ ಬದಲಿಸಿದ ಬಾಲಕ.** ಘಟಕ ಯೋಜನೆ ಸಾಮರ್ಥ್ಯಗಳು :- ಆಲಿಸುವುದು :-ಸರಳ ಪದ್ಯ ಮತ್ತು ಕಥೆಗಳನ್ನು ಗಟ್ಟಿಯಾಗಿ ಓದುವುದು ಮತ್ತು ಅರ್ಥೈಸಿಕೊಳ್ಳುವುದು. ** ಬರಹ:-ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ನಕಲು ಮಾಡುವುದು.*ಪರಿಚಿತ ಸರಳ ವಾಕ್ಯಗಳನ್ನು ಬರೆಯುವುದು.

ವರ್ಗ:-೫.

ವಿಷಯ :-ಕನ್ನಡ.

ದಿನಾಂಕ. :-.

| ಕಲಿಕೆಯ ಹಂತಗಳು. | ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು. | ಭೋಧನಾ ಕಲಿಕೋಪಕರಣಗಳು | ಮೌಲ್ಯಮಾಪನದ ಸಾಧನ - ತಂತ್ರಗಳು | ಶಿಕ್ಷಕರ. ಸ್ವ-ಅವಲೋಕನ | ಅವಧಿ |
|---|---|---|---|---|---|

Sirsi Kannada Teachers group(www.studymanzil.com)

| | | | | | |
|---|---|---|---|---|---|
| ತೊಡಗಿಸಿಕೊಳ್ಳುವಿಕೆ<br>Engage | ಪೂರ್ವ ಸಿದ್ಧತೆ /ಪೂರಕ ಚಟುವಟಿಕೆ :- ಶಿಕ್ಷಕರು ಮಕ್ಕಳಿಗೆ ಸರಳ ಕಥೆಗಳ ಮಿಂಚು ಪಟ್ಟಿಗಳನ್ನು ಕೊಟ್ಟು ಜೋರಾಗಿ ಓದುವಂತೆ ಪ್ರೇರೇರಿಪಿಸುವರು. ಕಥೆಗೆ ಸಂಬಂಧಿಸಿದ ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುವರು. | ಕಥೆಗಳ ಮಿಂಚು ಪಟ್ಟಿಗಳು | ತಂತ್ರ:-ಓದುವುದು.<br>ಸಾಧನ:-ಕಥೆಗಳು | ಎಲ್ಲಾ ವಿದ್ಯಾರ್ಥಿಗಳು ಚಟುವಟಿಕೆಯೊಂದಿಗೆ ನನ್ನ ತರಗತಿಯಲ್ಲಿ ತೊಡಗಿಸಿಕೊಂಡಿದ್ದಾರೆಯೇ? | |
| ಪತ್ತೆ ಹಚ್ಚುವಿಕೆ Explore | ಶಿಕ್ಷಕರು ಮಕ್ಕಳಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು.(೧) ಶರೀರದ ಅಂಗಗಳ ಹೆಸರು ಹೇಳಿರಿ. (೨) ಹಸ್ತವನ್ನು ತೋರಿಸುತ್ತಾ ಇದು ಏನು ಎಂದು ಕೇಳುವುದು. (೩) ಹಸ್ತದಲ್ಲಿ ಏನಿದೆ? ಹೇಳಿ ನೋಡೋಣ? (೪) ಬಾಲಕ ಎಂದರೆ ಯಾರು? ಗೊತ್ತಾ? ಹಾಗಾದರೆ ಇಂದು ನಾವು"ಹಸ್ತರೇಖೆ ಬದಲಿಸಿದ ಬಾಲಕ"ಪದ್ಯವನ್ನು ಅಭ್ಯಾಸ ಮಾಡೋಣ. | ಪ್ರಶ್ನೆಗಳ ಸಂಗ್ರಹ | ತಂತ್ರ:-ಮೌಖಿಕ<br>ಸಾಧನ:-ಮೌಖಿಕ ಪ್ರಶ್ನೆಗಳು. | ನಾನು ಕೇಳಿದ ಪ್ರಶ್ನೆಗಳು ಮಕ್ಕಳಿಗೆ ಅರ್ಥವಾಯಿತೇ? | |
| ವಿವರಣೆ/ವ್ಯಕ್ತಪಡಿಸುವಿಕೆ.<br>Explain /express | ಶಿಕ್ಷಕರಿಂದ ಮಾದರಿ ವಾಚನ (ಗಟ್ಟಿ ಓದು):- ತಕ್ಷಶಿಲೆ ಪ್ರಾಚೀನ ಭಾರತದ ---------------ಪಾಣಿನಿ ಉದಾಹರಣೆ ಯಾಗಿದ್ದಾನೆ, ಈ ಪಾಠವನ್ನು ಶಿಕ್ಷಕರು ಸೂಕ್ತ ಸ್ವರ-ಭಾರ ಉಚ್ಚಾರಣೆ, ನಿಲುಗಡೆ ಮತ್ತು ಧ್ವನಿ ಏರಿಳಿತದೊಂದಿಗೆ ಮಾದರಿಯಾಗಿ (ಗಟ್ಟಿಯಾಗಿ) ಓದುವರು.<br>ಹೊಸ ಪದಗಳ ಪರಿಚಯ:-ಶಿಕ್ಷಕರು ಈ ಕೆಳಗಿನ ಪದಗಳ ಅರ್ಥವನ್ನು ಕರಿಹಲಗೆಯ ಮೇಲೆ ಬರೆದು ಅರ್ಥೈಸುವರು. ಉದಾಹರಣೆ:-ಅಭಿರುಚಿ=ಆಸಕ್ತಿ, ಛಲ=ಹಟ, ಪ್ರಾಚೀನ=ಹಿಂದಿನ, ಘನತೆ=ಹಿರಿಮೆ, ವಿದ್ಯಾ ದಾನ=ಶಿಕ್ಷಣ ನೀಡು, ಕಲಕು=ಕದಡು ಇತ್ಯಾದಿ.<br>ವಿದ್ಯಾರ್ಥಿಗಳ ಮೌನ ಓದು:-. ಶಿಕ್ಷಕರು ವಿದ್ಯಾರ್ಥಿಗಳಿಗೆ ಈ ಪಾಠವನ್ನು ಮೌನವಾಗಿ ಓದಲು ಪ್ರೇರೇರಿಪಿಸುವರು ಮತ್ತು ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಲು ತಿಳಿಸುವರು.೧) ಗುರುಗಳು ಬಾಲಕನ ಕೈ ನೋಡಿ ಏನೆಂದು ಹೇಳಿದರು ? (೨) ಪಾಣಿನಿಯ ಗುರುವಿನ ಹೆಸರೇನು?<br>ಗ್ರಹಣ ಶಕ್ತಿಯ ಪರಿಶೀಲನೆ :- ಶಿಕ್ಷಕರು ಮಕ್ಕಳಿಗೆ ಕಥೆ ವಿಧಾನದ ಮೂಲಕ ಈ ಪಾಠದ ಸಾರಾಂಶವನ್ನು | ಪಠ್ಯಪುಸ್ತಕ<br>ಕರಿ ಹಲಿಗೆ, ಪಠ್ಯಪುಸ್ತಕ<br>ಪಠ್ಯಪುಸ್ತಕ<br>ಪಠ್ಯಪುಸ್ತಕ. ಕರಿ ಹಲಿಗೆ | ತಂತ್ರ:- ಓದಿ ಗ್ರಹಿಸುವ. ಕೌಶಲದ ಮೌಲ್ಯಮಾಪನ<br>ತಂತ್ರ:-ಬರಹ.<br>ಸಾಧನ:- ಶಬ್ದಾರ್ಥಗಳು<br>ತಂತ್ರ:-ಓದಿ ಗ್ರಹಿಸುವ. ಕೌಶಲದ ಮೌಲ್ಯಮಾಪನ.<br>ತಂತ್ರ:-ಅವಲೋಕನ.<br>ಸಾಧನ:-ಅವಲೋಕನ ಪಟ್ಟಿ | ಎಷ್ಟು ಮಕ್ಕಳು ಮಾದರಿ ಪಾಠವನ್ನು ಆಸಕ್ತಿಯಿಂದ ಆಲಿಸಿದರು ?<br>ಎಲ್ಲ ಮಕ್ಕಳು ಹೊಸ ಪದಗಳು ಅರ್ಥವನ್ನು ತಿಳಿದುಕೊಂಡಿರೇ?<br>ಎಷ್ಟು ಮಕ್ಕಳು ಪಾಠವನ್ನು ಮೌನವಾಗಿ ಓದಲು ಸಮರ್ಥಿಸಿದ್ದಾರೇ?<br>ನಾನು ನನ್ನ ಬೋಧನೆಯಲ್ಲಿ ಏನು ಬದಲಾವಣೆ ಮಾಡಿಕೊಳ್ಳಲಿ? | |

Sirsi Kannada Teachers group(www.studymanzil.com)

| | | | | | |
|---|---|---|---|---|---|
| | ವಿವರಿಸುವರು. ನಂತರ ಮಕ್ಕಳಿಗೆ ಗುಂಪುಗಳಲ್ಲಿ ಕೂಡ್ರಿಸಿ ಕೆಳಗಿನ ಪ್ರಶ್ನೆಗಳಿಗೆ ಚರ್ಚಿಸಿ ಉತ್ತರ ಬರೆಯುವಂತೆ ಪ್ರೋತ್ಸಾಹಿಸುವವರು .(೧) "ಅವನ ಕೈಯಲ್ಲಿ ವಿದ್ಯಾರೇಖೆ ಯಿಲ್ಲ ವಿದ್ಯೆ ಹತ್ತುವುದಿಲ್ಲ"ಈ ಮಾತನ್ನು ಯಾರು ಯಾರಿಗೆ ಹೇಳಿದರು? (೨) ತಾಯಿ ಗುರುಕುಲಕ್ಕೆ ಏಕೆ ಬಂದಳು? (೩) ಬಾಲಕನ ತಾಯಿಯ ಹೆಸರೇನು? ವ್ಯಾಕರಣ:-. ಶಿಕ್ಷಕರು ಮಕ್ಕಳಿಗೆ ವಿವಿಧ ಉದಾಹರಣೆಗಳ ಲೇಖನ ಚಿಹ್ನೆಗಳನ್ನು ಪರಿಚಯಿಸುವರು ಉದಾ:- (.) ಪೂರ್ಣವಿರಾಮ ನಾನು ಶಾಲೆಗೆ ಹೋಗುತ್ತೇನೆ. ಇತ್ಯಾದಿ. | ಪಠ್ಯಪುಸ್ತಕ, ಕರಿಹಲಿಗೆ. | ತಂತ್ರ:-ಆಲಿಸುವುದು. ಸಾಧನ:-ಲೇಖನ ಚಿಹ್ನೆಗಳು | ಎಷ್ಟು ಮಕ್ಕಳು ಲೇಖನ ಚಿಹ್ನೆಗಳನ್ನು ಅರಿತುಕೊಂಡರು? | |
| ವಿಷಯದ ವಿಸ್ತರಣೆ Expand | ವಿದ್ಯಾರ್ಥಿಗಳಿಂದ ಗಟ್ಟಿ ಓದು.:- ವಿದ್ಯಾರ್ಥಿಗಳ ಮೊದಲ ಗುಂಪಿನಲ್ಲಿ ಹಿರೇಮಣಿ ನೆತೃತ್ವದಲ್ಲಿ ಪಾಠವನ್ನು ಓದುವರು ,ತಪ್ಪನ್ನು ತಿದ್ದುದನು . ನಂತರ ಶಿಕ್ಷಕರು ಸರದಿಯಂತೆ ವೈಯಕ್ತಿಕವಾಗಿ ಓದಿಸುವರು . ಓದಿನಲ್ಲಿ ತೊಂದರೆ ಪಡುವ ಮಕ್ಕಳನ್ನು ಗುರಿತಿಸಿ ಹೆಚ್ಚಿನ ಗಮನ ಹರಿಸುವರು. *ಚಟುವಟಿಕೆ :-. ಅಭ್ಯಾಸ ಪುಸ್ತಕ ದಲ್ಲಿ ಗುಣಿತಾಕ್ಷರ ಹಾಗೂ ಒತ್ತಕ್ಷರ ಪದಗಳನ್ನು ನಕಲು ಮಾಡಿಸುವುದು. *ಬಾಲಕ ಹಾಗೂ ಗುರುಗಳ ಸಂಭಾಷಣೆಗಳನ್ನು ತರಗತಿಯಲ್ಲಿ ಗೆಳೆಯರೊಂದಿಗೆ ಸೇರಿ ಅಭಿನಯದ ಮೂಲಕ ಪ್ರದರ್ಶಿಸಲು ಸೂಚಿಸುವುದು. *ಏಕಲವ್ಯನ ಕಥೆಯನ್ನು ಓದಿ ಪ್ರಶ್ನೆಗೆಳಿಗೆ ಉತ್ತರಿಸಲು ತಿಳಿಸುವುದು. | ಪಠ್ಯಪುಸ್ತಕ<br><br>ಪಠ್ಯಪುಸ್ತಕ, ಕರಿಹಲಿಗೆ ಮಕ್ಕಳ ಭಾಗವಹಿಸುವಿಕೆ. | ತಂತ್ರ:-ಗಟ್ಟಿ ಓದು. ಸಾಧನ:-ವೈಯಕ್ತಿಕವಾಗಿ ಓದುವುದು.<br><br>ತಂತ್ರ:- ಬರಹ, ಅಭಿವ್ಯಕ್ತಿ ಸಾಧನ:-ಪದಗಳು ನಾಟಕಾಭಿನಯ ಪ್ರಶ್ನೆಗಳು. | ಎಷ್ಟು ಮಕ್ಕಳು ಗಟ್ಟಿಯಾಗಿ ಓದಲು ಸಮರ್ಥರಿದ್ದಾರೇ?<br><br>ಕೊಟ್ಟ ಚಟುವಟಿಕೆಯನ್ನು ಮಾಡುವಲ್ಲಿ ಯಾವ ಮಕ್ಕಳು ತೊಂದರೆ ಅನುಭವಿಸಿದ್ದರು? | |
| ಮೌಲ್ಯಮಾಪನ. Evaluation | ನಿಯೋಜಿತ ಕಾರ್ಯ /ಮೌಲ್ಯಮಾಪನ.:- * ಭಾಷಾಭ್ಯಾಸ ಚಟುವಟಿಕೆಯನ್ನು ಮಾಡಲು ಮಾರ್ಗದರ್ಶಿಸುವುದು. ಮತ್ತು ಗದ್ಯ ಪಾಠವನ್ನು ಗಟ್ಟಿಯಾಗಿ ಓದಲು ರೂಡಿಸುವುದು. | ಪಠ್ಯಪುಸ್ತಕ. ನೋಟ್ ಪುಸ್ತಕ. | ತಂತ್ರ:-ಲಿಖಿತ ಓದು, ಸಾಧನ:-ಪ್ರಶ್ನೆಗಳು ಮತ್ತು ಪಾಠ. | ನಾನು ನನ್ನ ಮುಂದಿನ ಪಾಠವನ್ನು ಹೇಗೆ ಯೋಜನೆ ಮಾಡಲಿ?. | |

Sirsi Kannada Teachers group(www.studymanzil.com)

ಘಟಕದ ಹೆಸರು:- ೬. ಹಬ್ಬಗಳು. ಘಟಕ ಯೋಜನೆ. ಸಾಮರ್ಥ್ಯಗಳು :- *ಆಲಿಸುವಿಕೆ:-ಪಾಠವನ್ನು ಆಲಿಸಿ ಸರಳ ಪ್ರಶ್ನೆಗಳಿಗೆ ಉತ್ತರಿಸುವುದು. ವರ್ಗ:-೫.

ವಿಷಯ:-ಕನ್ನಡ. *ಬರಹ:-ಉಕ್ತ ಲೇಖನದ ಮೂಲಕ ಗುಣಿತಾಕ್ಷರ ಮತ್ತು ಸಂಯುಕ್ತ ಅಕ್ಷರ ಪದಗಳನ್ನು. ದಿನಾಂಕ:-.

ಬರೆಯುವುದು.

| ಕಲಿಕೆಯ ಹಂತಗಳು. | ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು. | ಭೋಧನಾ ಕಲಿಕೋಪಕರಣಗಳು | ಮೌಲ್ಯಮಾಪನದ ಸಾಧನ - ತಂತ್ರಗಳು | ಶಿಕ್ಷಕರ. ಸ್ವ-ಅವಲೋಕನ | ಅವಧಿ |
|---|---|---|---|---|---|
| ೧) ತೊಡಗಿಸಿಕೊಳ್ಳುವಿಕೆ Engage | ಪೂರ್ವ ಸಿದ್ಧತೆ/ಪೂರಕ ಚಟುವಟಿಕೆ:-. ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಪೂರಕ ಓದಿನಲ್ಲಿ ಕೂಡಲದ ಪದ್ಯವನ್ನು ಹಾಡಿ ಮಕ್ಕಳಿಂದ ಹಾಡಿಸಿ ಅದರ ಅರ್ಥವನ್ನು ವಿವರಿಸುವರು. | ಮಕ್ಕಳು ಭಾಗವಹಿಸುವಿಕೆ | ತಂತ್ರ:- ಅಭಿವ್ಯಕ್ತಿ ಸಾಧನ :-ಹಾಡು ಹಾಡುವುದು. | ನಾನು ಇಲ್ಲ ವಿದ್ಯಾರ್ಥಿಗಳನ್ನು ಇಂದಿನ ತರಗತಿಯಲ್ಲಿ ತೊಡಗಿಸಿಕೊಂಡಿದ್ದೇನೆಯೇ? | |
| ೨) ಪತ್ತೆ ಹಚ್ಚುವಿಕೆ. Explore | ಶಿಕ್ಷಕರು ಮಕ್ಕಳಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು (೧) ನೀವು ಹೊಸ ಹೊಸ ಬಟ್ಟೆ-ಬಡವೆಗಳನ್ನು ಯಾವ ಯಾವ ಸಂದರ್ಭದಲ್ಲಿ ಕಂಡುಕೊಳ್ಳುತ್ತೀರಿ ? (೨) ನಿಮಗೆ ಗೊತ್ತಿರುವ ಹಬ್ಬಗಳ ಹೆಸರು ಹೇಳಿರಿ. ಹಾಗಾದರೆ ಇಂದು ನಾವು"ಹಬ್ಬಗಳು"ಪಾಠವನ್ನು ಓದೋಣ. | ಪ್ರಶ್ನೆಗಳ ಸಂಗ್ರಹ | ತಂತ್ರ:-ಮೌಖಿಕ. ಸಾಧನ:- ಮೌಖಿಕ ಪ್ರಶ್ನೆಗಳು. | ಮಕ್ಕಳು ಇಂದಿನಿಂದ ಚಟುವಟಿಕೆಯಲ್ಲಿ ಆಸಕ್ತಿಯಿಂದ ಭಾಗವಹಿಸಿದ್ದಾರೇ? | |
| ೩) ವಿವರಣೆ/ವ್ಯಕ್ತಪಡಿಸುವುದು explain /express | ಶಿಕ್ಷಕರು ಮಾದರಿ ವಾಚನ (ಗಟ್ಟಿ ಓದು):-ಗೋಪಿ, ಗಂಗಾ, ಜಾಫರ-------------------ಶಿಕ್ಷಕರು ದಿನಾಚರಣೆಯ ಹಬ್ಬಗಳು ಶಿಕ್ಷಕರು ಈ ಪಾಠವನ್ನು ಸೂಕ್ತ ಭಾರ ಉಚ್ಚಾರಣೆ ನಿಲುಗಡೆ ಮತ್ತು ಧ್ವನಿ ಏರಿಳಿತದೊಂದಿಗೆ ವಚನ ಮಾಡುವರು.<br>ಹೊಸ ಪದಗಳ ಪರಿಚಯ:- ಶಿಕ್ಷಕರು ಈ ಕೆಳಗಿನ ಪದಗಳ | ಪಠ್ಯಪುಸ್ತಕ<br>ಪಠ್ಯಪುಸ್ತಕ, ನೋಟ್ ಪುಸ್ತಕ | ಓದಿ ಗ್ರಹಿಸುವ ಕೌಶಲದ ಮೌಲ್ಯಮಾಪನ | ನನ್ನ ಮಾದರಿ ವಾಚನವನ್ನು ಮಕ್ಕಳು ಆಸಕ್ತಿಯಿಂದ ಆಲಿಸಿದರೇ? | |

| | | | | | |
|---|---|---|---|---|---|
| | ಅರ್ಥವನ್ನು ಕರಿ ಹಲಿಗೆಯ ಮೇಲೆ ಬರೆದು ಅರ್ಥೈಸುವರು. ಉದಾಹರಣೆ:-ಸಂಕೇತ-ಸೂಚಕ, ವಠಾರ-ಮನೆಯ ಗುಂಪುಗಳು. ವಿದ್ಯಾರ್ಥಿಗಳಿಂದ ಮೌನ ಓದು.:-. ಶಿಕ್ಷಕರು ಈ ಪಾಠವನ್ನು ಮಕ್ಕಳಿಗೆ ಮೌನವಾಗಿ ಓದುವಂತೆ ಪ್ರೇರೇಪಿಸುವರು. ಮತ್ತು ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹುಡುಕುವಂತೆ ಸೂಚಿಸುವರು. (೧) ರಂಜಾನ್ ಹಬ್ಬಕ್ಕೆ ಏನೇನು ದಾನ ಮಾಡುತ್ತಾರೆ? (೨) ರಾಷ್ಟ್ರೀಯ ಹಬ್ಬಗಳು ಯಾವುವು? ಗ್ರಹಣ ಶಕ್ತಿ ಪರಿಶೀಲನೆ :- ಶಿಕ್ಷಕರು ಮಕ್ಕಳಿಗೆ ಹಬ್ಬಗಳನ್ನು ಸೂಚಿಸುವ ಚಿತ್ರಪಟಗಳನ್ನು ತೋರಿಸುತ್ತಾ , ಪ್ರಶ್ನೆಗಳನ್ನು ಚರ್ಚಿಸುತ್ತಾ ಚರ್ಚಾ ವಿಧಾನದ ಮೂಲಕ ವಿವರಿಸುವರು. ಕೆಲವು ಪ್ರಶ್ನೆಗಳನ್ನು ಕೊಟ್ಟು ಗುಂಪಿನಲ್ಲಿ ಚರ್ಚಿಸಿ ಬರೆಯುವಂತೆ ಪ್ರೋತ್ಸಾಹಿಸುವರು. (೧) ರಂಜಾನ್ ಹಬ್ಬದ ವಿಶೇಷತೆ ಏನು? (೨) ಭಾರತದಲ್ಲಿ ವಿವಿಧ ಜನರು ಆಚರಿಸುವ ಹಬ್ಬಗಳು ಯಾವವು? ವ್ಯಾಕರಣ:- ಶಿಕ್ಷಕರು ಮಕ್ಕಳಿಗೆ ವಿರುದ್ಧ ಪದಗಳನ್ನು ಬರೆಯಲು ಕೊಡುವರು ತಪ್ಪಿದ್ದಲ್ಲಿ ತಿಳಿಸಿ ಹೇಳುವರು. | ಪಠ್ಯಪುಸ್ತಕ<br>ಚಿತ್ರಪಟಗಳು, ಪಠ್ಯಪುಸ್ತಕ, ನೋಟ್ ಪುಸ್ತಕ<br>ಕರಿಹಲಿಗೆ. ನೋಟ್ ಪುಸ್ತಕ. | ತಂತ್ರ:-ಬರಹ . ಸಾಧನ:-ಶಬ್ದಾರ್ಥಗಳು.<br>ಓದಿ ಗ್ರಹಿಸುವ ಕೌಶಲದ ಮೌಲ್ಯಮಾಪನ<br>ತಂತ್ರ:-ಅವಲೋಕನ ಸಾಧನ:-ಅವಲೋಕನ ಪಟ್ಟಿ.<br>ತಂತ್ರ:-ಬರಹ. ಸಾಧನ:-ವಿರುದ್ಧ ಪದಗಳು. | ಎಲ್ಲರೂ ಪದಗಳ ಅರ್ಥವನ್ನು ಗ್ರಹಿಸಿದರೇ?<br>ಎಷ್ಟು ವಿದ್ಯಾರ್ಥಿಗಳು ಮೌನವಾಗಿ ಓದಲು ಸಮರ್ಥರಿದ್ದಾರೆ?<br>ನನ್ನ ತರಗತಿಯಲ್ಲಿ ಸರಿಯಾಗಿ ಸಾಗಿದ್ದೇನು?<br>ಎಷ್ಟು ಮಕ್ಕಳು ವಿರುದ್ಧ ಪದಗಳನ್ನು ಸರಿಯಾಗಿ ಬರೆದಿದ್ದಾರೇ? | |
| ವಿಷಯದ ವಿಸ್ತರಣೆ expand . | ವಿದ್ಯಾರ್ಥಿಗಳ ಗಟ್ಟಿ ಓದು :- ಶಿಕ್ಷಕರು ಗುಂಪಿನಲ್ಲಿ ಹಿರೇಮಣಿ ನೇತೃತ್ವದಲ್ಲಿ ಪಾಠವನ್ನು ಓದಿಸುವರು . ನಂತರ ಸರದಿಯಂತೆ ಎಲ್ಲಾ ಮಕ್ಕಳಿಂದ ಎಲ್ಲ ಮಕ್ಕಳಿಂದ ಪಾಠದ ಕೆಲವು ವಾಕ್ಯಗಳನ್ನು ಓದಿಸುವರು . ತಪ್ಪು ಓದಿದೆ ಮಕ್ಕಳನ್ನು ಗುರುತಿಸಿ ಅವರ ಕಡೆಗೆ ಹೆಚ್ಚಿನ ಗಮನ ಹರಿಸುವರು. ಚಟುವಟಿಕೆ :- * ಗುಣಿತಾಕ್ಷರ ಮತ್ತು ಗುಣಿತಾಕ್ಷರಗಳ ಉಕ್ತ ಲೇಖನ ಕೊಡುವುದು ತಪ್ಪಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವರು.* ರಾಷ್ಟ್ರೀಯ ಹಬ್ಬಗಳ ಮಾಹಿತಿಯನ್ನು ಗಟ್ಟಿಯಾಗಿ ಓದುವುದು *ಭಾಷೆ ಬ್ಯಾಸ ಚಟುವಟಿಕೆಯನ್ನು ಮಾಡಿಸುವುದು. | ಪಠ್ಯಪುಸ್ತಕ<br>ನೋಟ್ ಪುಸ್ತಕ ಪಠ್ಯಪುಸ್ತಕ | ತಂತ್ರ :-ಗಟ್ಟಿ ಓದು. ಸಾಧನ:- ವೈಯಕ್ತಿಕ ಓದು<br>ತಂತ್ರ :- ಬರಹ, ಓದು ಸಾಧನ :-ಉಕ, ಲೇಖನ ಮತ್ತು ಮಿಂಚು ಪಟ್ಟಿಗಳು . | ಎಷ್ಟು ಮಕ್ಕಳು ಪಾಠವನ್ನು ಗಟ್ಟಿಯಾಗಿ ಓದಲು ಸಮರ್ಥಸರಿದ್ದಾರೆ ?<br>ಎಷ್ಟು ಮಕ್ಕಳು ಉತ್ತಲೇಖನದೆ ಕೊಡಲಾದ ಪದಗಳನ್ನು ಸರಿಯಾಗಿ ಬರೆದಿದ್ದಾರೆ ? | |

| | | | | | |
|---|---|---|---|---|---|
| ಮೌಲ್ಯಮಾಪನ Evaluation. | ನಿಯೋಜಿತ ಕಾರ್ಯ/ಮೌಲ್ಯಮಾಪನ:- * ಹಬ್ಬಗಳ ಚಿತ್ರಪಟವನ್ನು ತಂದು ಅಂದವಾಗಿ ಕತ್ತರಿಸಿ, ತಯಾರಿಸಿಕೊಂಡು ಬರಲು ತಿಳಿಸುವುದು. * ನಿಮಗೆ ಗೊತ್ತಿರುವ ರಾಷ್ಟ್ರೀಯ ಮತ್ತು ಧಾರ್ಮಿಕ ಹಬ್ಬಗಳು ಹೆಸರು ಬರೆಯಲು ತಿಳಿಸುವರು. | ಚಿತ್ರಪಟ, ನೋಟ್ ಪುಸ್ತಕ, ಪಠ್ಯಪುಸ್ತಕ. | ತಂತ್ರ:-ಯೋಜನೆ. ಸಾಧನ :- ನಿಯೋಜಿತ ಕಾರ್ಯ (ಅಲ್ಬಂ ತಯಾರಿಕೆ) | ನಾನು ಮುಂದಿನ ಪಾಠವನ್ನು ಆಯೋಜಿಸಲಿ ? | |

ಘಟಕ ಹೆಸರು :-೭ ಸಾರುತಿದೆ ಸೃಷ್ಟಿ ಘಟಕ ಯೋಜನೆ. ಸಾಮರ್ಥ್ಯಗಳು :-* ಮಾತನಾಡುವುದು:-ಭವಾನಿ ನಯದ ಮೂಲಕ ಹಾಡುವುದು. ವರ್ಗ:-೫.

ವಿಷಯ:-ಕನ್ನಡ. * ಓದುವುದು :- ಗಟ್ಟಿಯಾಗಿ ಓದುವುದು ಮತ್ತು ಸರಣ ಪ್ರಶ್ನೆಗಳಿಗೆ ಉತ್ತರಿಸುವುದು. ದಿನಾಂಕ:-.

| ಕಲಿಕೆಯ ಹಂತಗಳು. | ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು. | ಭೋಧನಾ ಕಲಿಕೋಪಕರಣಗಳು | ಮೌಲ್ಯಮಾಪನದ ಸಾಧನ - ತಂತ್ರಗಳು | ಶಿಕ್ಷಕರ. ಸ್ವ-ಅವಲೋಕನ | ಅವಧಿ |
|---|---|---|---|---|---|
| ೧) ತೊಡಗಿಸಿಕೊಳ್ಳುವಿಕೆ engage | ಪೂರ್ವ ಸಿದ್ಧತೆ /ಪೂರಕ ಚಟುವಟಿಕೆ :- ಶಿಕ್ಷಕರು ಮಕ್ಕಳಿಗೆ ವೃತ್ತಾಕಾರವಾಗಿ ಕೊಡ್ರಿಸಿ ಪೂರಕ ಓದಿನಲ್ಲಿ ಕೊಟ್ಟ ಕಥೆಯನ್ನು ಓದಲು ಹೇಳುವರು ಉಳಿದ ಮಕ್ಕಳೂ ಅದನ್ನು | ಕಥೆ | ತಂತ್ರ :-ಓದುವುದು. ಸಾಧನ :- ಕಥೆ ಓದುವುದು | ನಾನು ಎಲ್ಲ ವಿದ್ಯಾರ್ಥಿಗಳನ್ನು ಇಂದಿನ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದೇನೆಯೇ? | |

Sirsi Kannada Teachers group(www.studymanzil.com)

| | | | | | |
|---|---|---|---|---|---|
| | ಪುನರಾವರ್ತಿಸುವುದು ನಂತರ ಕಥೆಗೆ ಸಂಬಂಧಿನ ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುವುದು. | | | | |
| ೨) ಪತ್ತೆಹಚ್ಚುವಿಕೆ. Explore | ಶಿಕ್ಷಕರು ಮಕ್ಕಳಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವವರು (೧) ನಿಮಗೆ ಸಿಹಿ ತಿನ್ನಲು ಇಷ್ಟವೇ? (೨) ಸಿಹಿಯಾಗಿರುವ ವಸ್ತುಗಳು ಯಾವವು. ? (೩) ಕಹಿಯಾಗಿರುವ ವಸ್ತುಗಳು ಯಾವವು.? (೪) ಯಾವ ಯಾವ ವಸ್ತುಗಳಲ್ಲಿ ಬೆಳರೆದೆ? (೫) ಸೃಷ್ಟಿ ಎಂದರೇನು ಗೊತ್ತಾ ? ಹಾಗಾದರೆ ಇಂದು ನಾವು"ಸಾರುತಿದೆ ಸೃಷ್ಟಿ"ಎಂಬ ಪದವನ್ನು ಕಲಿಯೋಣ. | ಪ್ರಶ್ನೆಗಳ ಬ್ಯಾಂಕ್ | ತಂತ್ರ:-ಅಭಿವ್ಯಕ್ತಿ.<br>ಸಾಧನ:-ಮೌಖಿಕ ಪ್ರಶ್ನೆಗಳು. | ನನ್ನ ಪ್ರಶ್ನೆಗಳಿಗೆ ಮಕ್ಕಳು ಸರಿಯಾಗಿ ಉತ್ತರಿಸಿದರೇ? | |
| ೩) ವಿವರಣೆ/ವ್ಯಕ್ತಪಡಿಸುವಿಕೆ. Explain /express. | ಶಿಕ್ಷಕರ ಮಾದರಿ ವಾಚನ (ಗಟ್ಟಿ ಓದು) :-ಹಣ್ಣಿನಲಿ , ಬೆಣ್ಣೆಯಲಿ---------------- ಕವಿಯಾಗು , ಕವಿಯಾಗು ಕವಿಯಾಗು ಎಂದು ಈ ಪದ್ಯವನ್ನು ಶಿಕ್ಷಕರು ಹಾವಭಾವ, ಅಭಿನಯದೊಂದಿಗೆ ರಾಗ-ಬದ್ಧವಾಗಿ ಹಾಡುವರು ಮತ್ತು ಮಕ್ಕಳಿಂದ ಹಾಡಿಸುವರು.<br>ಹೊಸ ಪದಗಳ ಪರಿಚಯ:- ಶಿಕ್ಷಕರು ಈ ಕೆಳಗಿನ ಪದಗಳ ಅರ್ಥವನ್ನು ಕರಿಹಲಿಗೆಯ ಮೇಲೆ ಬರೆದು ಅರ್ಚಿಸುವ.<br>ವಿದ್ಯಾರ್ಥಿಗಳಿಂದ ಮೌನ ಓದು :- ಶಿಕ್ಷಕರು ಮಕ್ಕಳಿಗೆ ಈ ಪದ್ಯವನ್ನು ಮೌನವಾಗಿ ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವಂತೆ ಪ್ರೇರೇಪಿಸುವರು. (೧) ಯಾವ ಯಾವ ವಸ್ತುಗಳಲ್ಲಿ ಪ್ರಕೃತಿ ಛವಿಯಾಗಿ ನಿಂತಿದೆ ? (೨) ಹಾಲಿನಲ್ಲಿ ಏನಿದೆ ? ಗ್ರಹಣ ಶಕ್ತಿಯ ಪರಿಶೀಲನೆ:- ಈ ಪದ್ಯವನ್ನು ಶಿಕ್ಷಕರು ವಸ್ತುಗಳ ಚಿತ್ರಗಳನ್ನು ತೋರಿಸುತ್ತಾ ಚರ್ಚೆ ವಿಧಾನದ ಮೂಲಕ ಪದ್ಯದ ಸಾರಾಂಶವನ್ನು ವಿವರಿಸುವರು. ಗುಂಪುಗಳಲ್ಲಿ ಪ್ರಶ್ನೆ ಕೊಟ್ಟು ಉತ್ತರ ಬರೆಯುವಂತೆ ಪ್ರೋತ್ಸಾಹಿಸುವರು.<br>ವ್ಯಾಕರಣ:- ಶಿಕ್ಷಕರು ಮಕ್ಕಳಿಗೆ ಪದಗಳನ್ನು ಬಿಡಿಸಿ ಬರೆಯುವ | ಪಠ್ಯಪುಸ್ತಕ<br>ಶಬ್ದಕೋಶ, ಕರಿಹಲಿಗೆ.<br>ಪಠ್ಯಪುಸ್ತಕ<br>ಚಿತ್ರಗಳು ಪಠ್ಯಪುಸ್ತಕ<br>ಕರಿ ಹಲಿಗೆ.<br>ಪಠ್ಯಪುಸ್ತಕ | ಓದಿ ಗ್ರಹಿಸುವ ಕೌಶಲದ ಮೌಲ್ಯಮಾಪನ<br>ತಂತ್ರ:-ಬರಹ.<br>ಸಾಧನ :-ಶಬ್ದಾರ್ಥಗಳು<br>ಓದಿ ಗ್ರಹಿಸುವ ಕೌಶಲದ ಮೌಲ್ಯಮಾಪನ.<br>ತಂತ್ರ :-ಅವಲೋಕನ<br>ಸಾಧನ:-. ಅವಲೋಕನ ಪಟ್ಟಿ<br>ತಂತ್ರ :-ಬರಹ.<br>ಸಾಧನ:-ಪದ ಬಿಡಿಸುವುದು. | ಎಲ್ಲ ಮಕ್ಕಳು ಶಿಕ್ಷಕರು ಹಾಡಿದಂತೆಯೇ ಹಾಡಿದ್ದಾರೇ?<br>ಎಲ್ಲರೂ ಪದಗಳ ಅರ್ಥವನ್ನು ಗ್ರಹಿಸಿದರೇ?<br>ಎಷ್ಟು ಮಕ್ಕಳು ಪದ್ಯವನ್ನು ಮೌನವಾಗಿ ಓದಿ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯ ಪಡೆದಿದ್ದಾರೆ ?<br>ನಾನು ಕಲಿಸಿದ ವಿಧಾನದಿಂದ ನನಗೆ ಸಂತೋಷವಾಗಿದೆಯೇ?<br>ಎಷ್ಟು ಮಕ್ಕಳು ಪದ ಬಿಡಿಸುವ ಸಾಮರ್ಥ್ಯ ಪಡೆದಿದ್ದಾರೇ ? | |

Sirsi Kannada Teachers group(www.studymanzil.com)

| | | | | | |
|---|---|---|---|---|---|
| | ವಿಧಾನ ತಿಳಿಸಿಕೊಡುವರು.<br>ಉದಾಹರಣೆಗೆ :- ಹಾಲು + ತೆನೆ=ಹಾಲ್ದೆನೆ. | | | | |
| ೪. ವಿಷಯದ ವಿಸ್ತರಣೆ.<br>Expand | ವಿದ್ಯಾರ್ಥಿಗಳಿಂದ ಗಟ್ಟಿ ಓದು:- ಮಕ್ಕಳನ್ನು ಗುಂಪುಗಳಲ್ಲಿ ಕೂಡ್ರಿಸಿ ಪದ್ಯದ ಮೊದಲನೆಯ ಸಾಲು ಒಂದು ಗುಂಪಿನವರು ಹೇಳಿದರೆ ಎರಡನೆಯ ಸಾಲು ಇನ್ನೊಂದು ಗುಂಪಿನವರು ಹೇಳುವುದು. ಹೀಗೆ ಪೂಣ ಪದ್ಯ ಹೇಳಿದ ನಂತರ ಒಂದೊಂದು ನುಡಿ, ಪ್ರೀತಿ ಗುಂಪು ಪೂರ್ಣ ಪದ್ಯ ಹೇಳುವುದು, ಇದಾದ ನಂತರ ವೈಯುಕ್ತಿಕವಾಗಿ ಹಾಡುವಂತೆ ಪ್ರೋತ್ಸಾಹಿಸುವರು.<br>ಚಟುವಟಿಕೆ :- ಮಕ್ಕಳನ್ನು ಗುಂಪುಗಳಲ್ಲಿ ಕೂಡ್ರಿಸಿ 1ನೇ ಗುಂಪು ಸಿಹಾಯೂಗಿರುವ 2ನೇ ಗುಂಪು- ಕಹಿಯಾಗಿರುವ 3ನೇ - ಗುಂಪು ಹುಳಿಯಾಗಿರುವ ವಸ್ತುಗಳನ್ನು ಪಟ್ಟಿ ಮಾಡಿ ತೋರಿಸಲು ಸೂಚಿಸುವುದು.** ಚಿಕ್ಕ ಚಿಕ್ಕ ಪ್ರಶ್ನೆಗಳ ಮಿಂಚು ಪಟ್ಟಿಯನ್ನು ಓದಿ ಅದಕ್ಕೆ ಉತ್ತರಿಸುವುದು. | ಪಠ್ಯಪುಸ್ತಕ<br>ನೋಟ್ ಪುಸ್ತಕ.<br>ಪ್ರಶ್ನೆಗಳ ಮಿಂಚುಪಟ್ಟಿ | ತಂತ್ರ:-ಗಟ್ಟಿ ಓದು .<br>ಸಾಧನ:-ವ್ಯಯಕ್ತಿಕ ಓದು<br>ತಂತ್ರ :-ಬರಹ .<br>ಸಾಧನ:-ಪಟ್ಟಿ ಮಾಡುವುದು | ಎಷ್ಟು ಮಕ್ಕಳು ವ್ಯಕ್ತಿತ್ವವಾಗಿ ಹಾಡುವ ಸಾಮರ್ಥ್ಯ ಪಡೆದಿದ್ದಾರೆ ?<br>ಯಾವ ಗುಂಪು ಕೊಟ್ಟ ಚಟುವಟಿಕೆ ಸರಿಯಾಗಿ ಮಾಡಿದರು? | |
| ಮೌಲ್ಯಮಾಪನ.<br>Evaluation | ನಿಯೋಜಿತ ಕಾರ್ಯ/ಮೌಲ್ಯಮಾಪನ :- *ಪದ್ಯವನ್ನು ಸಾಮೂಹಿಕವಾಗಿ ಹಾಡುವಂತೆ ಸೂಚಿಸುವರು.<br>**ಅಭ್ಯಾಸ ಚಟುವಟಿಕೆ ಮಾಡಲು ಮಾರ್ಗದರ್ಶನ ಮಾಡುವುದು. | ಪಠ್ಯಪುಸ್ತಕ.<br>ನೋಟ್ ಪುಸ್ತಕ | ತಂತ್ರ:-ಅಭಿವ್ಯಕ್ತಿ ಮತ್ತು ಬರಹ. ಸಾಧನ :- ಸಾಮೂಹಿಕ ಗಾಯನ ಮತ್ತು ಪ್ರಶ್ನೆಗಳು | ನಾನು ನನ್ನ ಮುಂದಿನ ಪಾಠವನ್ನು ಹೇಗೆ ಯೋಚಿಸಲಿ ? | |

ಘಟಕದ ಹೆಸರು :-೮ ಸಾಹಸಿ ಮಹಿಳೆಯರು. ಘಟಕ ಯೋಜನೆ ಸಾಮರ್ಥ್ಯಗಳು :- * ಓದುವಿಕೆ :-ಸರಳ ಪದ್ಯ, ಕಥೆ, ಘಟನೆಗಳನ್ನು ಗಟ್ಟಿಯಾಗಿ ಓದುವುದು. ವರ್ಗ :-೫.

ವಿಷಯ :- ಕನ್ನಡ. * ಮಾತನಾಡುವುದು:-ಸರಳ ಪ್ರಶ್ನೆಗಳಿಗೆ ಉತ್ತರಿಸುವುದು . ದಿನಾಂಕ:-.

| ಕಲಿಕೆಯ ಹಂತಗಳು. | ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು. | ಭೋಧನಾ ಕಲಿಕೋಪಕರಣಗಳು | ಮೌಲ್ಯಮಾಪನದ ಸಾಧನ - ತಂತ್ರಗಳು | ಶಿಕ್ಷಕರ. ಸ್ವ-ಅವಲೋಕನ | ಅವಧಿ |
|---|---|---|---|---|---|
| ೧) ತೊಡಗಿಸಿಕೊಳ್ಳುವಿಕೆ Engage | ಪೂರ್ವ ಸಿದ್ಧತೆ /ಪೂರಕ ಚಟುವಟಿಕೆ :-. ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಪೂರಕ ಓದಿನಲ್ಲಿ ಕೊಡಲಾದ "ಕಿತ್ತೂರು ಚೆನ್ನಮ್ಮ ಸುತ್ತೂರು ಒಡತ್ಯಾಗಿ" ಎಂಬ ಜಾನಪದ ಗೀತೆಯನ್ನು ರಾಗಬದ್ಧವಾಗಿ ಹಾಡಿ ಮಕ್ಕಳಿಂದ ಹಾಡಿಸುವುದು. | ಮಕ್ಕಳ ಭಾಗವಹಿಸುವಿಕೆ | ತಂತ್ರ:-ಅಭಿವ್ಯಕ್ತಿ. ಸಾಧನ:-ಹಾಡು ಹಾಡುವುದು | ಎಲ್ಲ ವಿದ್ಯಾರ್ಥಿಗಳನ್ನು ಈ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದೇನೆಯೇ? | |
| ೨) ಪತ್ತೆ ಹಚ್ಚುವಿಕೆ. Explore | ಶಿಕ್ಷಕರು ಮಕ್ಕಳಿಗೆ ಕೆಳಗಿನ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು. (೧) ನಮ್ಮ ದೇಶ ಯಾವುದು? (೨) ನಮ್ಮ ದೇಶಕ್ಕಾಗಿ ಹೋರಾಡಿದವರ ಹೆಸರು ಹೇಳಿರಿ? (೩) ಇವರ್ಯಾರು ಗುರುತಿಸಿ [ಚಿತ್ರ ತೋರಿಸಿ] (೪) ದೇಶಕ್ಕಾಗಿ, ಸಮಾಜ ಸೇವೆಗಾಗಿ ದುಡಿದ ಮಹಿಳೆಯರು ಹೆಸರು ಗೊತ್ತಾ? (೫) ಆರ್, ಕಲ್ಯಾಣಮ್ಮ, ಬಡಿಗೇರ ಸೀತಮ್ಮ ಇವರ ಹೆಸರು ಕೇಳಿದ್ದೀರಾ ಹಾಗಾದರೆ ಇಂದು ನಾವು ಸಾಹಸಿ ಮಹಿಳೆಯರು ಎಂಬ ಪಾಠವನ್ನು ಓದೋಣ. | ಪ್ರಶ್ನೆಗಳ ಬ್ಯಾಂಕ್ | ತಂತ್ರ :-ಅಭಿವ್ಯಕ್ತಿ. ಸಾಧನ:- ಮೌಖಿಕ ಪ್ರಶ್ನೆಗಳು | ಎಲ್ಲ ವಿದ್ಯಾರ್ಥಿಗಳು ಆಸಕ್ತಿಯಿಂದ ಇಂದಿನ ಚಟುವಟಿಕೆಯಲ್ಲಿ ಪಾಲ್ಗೊಂಡಿದ್ದಾರೇ? | |
| ವಿವರಣೆ /ವ್ಯಕ್ತಪಡಿಸುವಿಕೆ explain/express | ಶಿಕ್ಷಕರ ಮಾದರಿ ವಾಚನ :------------------------------------------------------------------------ಶಿಕ್ಷಕರು ಈ ಪಾಠವನ್ನು ಸೂಕ್ತ ಸ್ವರ-ಭಾರ, ಉಚ್ಚಾರಣೆ, ನಿಲುಗಡೆ ಮತ್ತು ಧ್ವನಿ ಏರಿಳಿತದೊಂದಿಗೆ ಮಾದರಿಯಾಗಿ ಓದುವರು. ಹೊಸ ಪದಗಳ ಪರಿಚಯ :- ಶಿಕ್ಷಕರು ಈ ಕೆಳಗಿನ ಪದಗಳ | ಪಠ್ಯಪುಸ್ತಕ<br>ಶಬ್ದಕೋಶ, ಕರಿ ಹಲಿಗೆ | ಓದಿ ಗ್ರಹಿಸುವ ಕೌಶಲದ ಮೌಲ್ಯಮಾಪನ | ಶಿಕ್ಷಕರ ಮಾದರಿ ವಾಚನವನ್ನು ಎಲ್ಲರೂ ಆಸಕ್ತಿಯಿಂದ ಆಲಿಸಿದಾ? | |

Sirsi Kannada Teachers group(www.studymanzil.com)

| | | | | | |
|---|---|---|---|---|---|
| | ಅರ್ಥವನ್ನು ಕರಿಹಲಿಗೆಯ ಮೇಲೆ ಬರೆದು ಅರ್ಥೈಸುವರು ಉದಾ :- ತಿರಂಗಿ =ಮೂರು ಬಣ್ಣ ಹೊಂದಿದ, ಸಂಸ್ಥಾನ=ರಾಜ , ಎಲ್, ಎಸ್=ಏಳನೇ ತರಗತಿ ಇತ್ಯಾದಿ.<br>ಮಕ್ಕಳಿಂದ ಮೌನ ಓದು :- ಶಿಕ್ಷಕರು ಮಕ್ಕಳಿಗೆ ಈ ಪಾಠವನ್ನು ಮೌನವಾಗಿ ಓದಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಹುಡುಕುವಂತೆ ಪ್ರೇರೇಪಿಸುವರು. (೧) ಕಲ್ಯಾಣಮ್ಮ ಯಾರದು ಏಳಿಗೆಗಾಗಿ ಬೆಯಿಸಿದರು? (೨) ಮಾಲಗತ್ತಿ ಗ್ರಾಮದ ಜನರು ಎಲ್ಲಿ ಧ್ವಜ ಏರಿಸಲು ನಿರ್ಧರಿಸಿದರು? ಗ್ರಹಣ ಶಕ್ತಿಯ ಪರಿಶೀಲನೆ:- ಶಿಕ್ಷಕರು ಮಕ್ಕಳಿಗೆ ಪ್ರಶ್ನೋತ್ತರ ಪಧ್ಧಲೆಯ ಮೂಲಕಈ ಪಾಠವನ್ನು ವಿವರಿಸಿ ಕೆಲವು ಪ್ರಶ್ನೆಗಳನ್ನು ಕೊಟ್ಟೂರಿನಲ್ಲಿ ಚರ್ಚಿಸಿ ಬರೆಯಲು ಹೇಳುವರು. (೧) ಆರ್ ಕಲ್ಯಾಣಮ್ಮ ಮಕ್ಕಳಿಗೆ ಯಾವ ಯಾವ ಕೆಲಸಗಳನ್ನು ಮಾಡಿದರು ? (೨) ಧ್ವಜ ವೇರಿಸಲು ಬಂದ ಸೀತಮ್ಮನ ರೂಪವನ್ನು ಪರ್ಣ ಸಿರಿ. ವ್ಯಾಕರಣ :- ಶಿಕ್ಷಕರು ಮಕ್ಕಳಿಗೆ ಭೂತಕಾಲ ,ವರ್ತಮಾನ ಕಾಲ ಮತ್ತು ಭವಿಷ್ಯಕಾಲ ಬಗ್ಗೆ ಉದಾಹರಣೆಗಳೊಂದಿಗೆ ತಿಳಿಸುವರು. | ಪಠ್ಯಪುಸ್ತಕ<br>ಪಠ್ಯ ಪುಸ್ತಕ , ನೋಟ್ ಪುಸ್ತಕ<br>ಪಠ್ಯ ಪುಸ್ತಕ, ಕರಿ ಹಲಿಗೆ | ತಂತ್ರ :-ಬರಹ.<br>ಸಾಧನ:-ಶಬ್ದಾರ್ಥಗಳು.<br>ಓದಿ ಗ್ರಹಿಸುವ ಕೌಶಲದ ಮೌಲ್ಯಮಾಪನ<br>ತಂತ್ರ :-ಅವಲೋಕನ<br>ಸಾಧನ :-ಅವಲೋಕನ ಪಟ್ಟಿ<br>ತಂತ್ರ :-ಬರಹ.<br>ಸಾಧನ :-ಕಾಲಗಳು | ಎಲ್ಲ ಮಕ್ಕಳು ಪದಗಳ ಅರ್ಥವನ್ನು ಗ್ರಹಿಸಿದರೇ?<br>ಎಷ್ಟು ವಿದ್ಯಾರ್ಥಿಗಳು ಮೌನವಾಗಿ ಓದಿಲು ಸಮರ್ಥಿಸಿದ್ದಾರೇ?<br>ನಾನು ವಿವರಿಸಿದ ವಿಧಾನದಿಂದ ನನಗೆ ತೃಪ್ತಿ ಇದೆಯೇ?<br>ಎಲ್ಲ ಮಕ್ಕಳು ಕಾಲಗಳನ್ನು ಸರಿಯಾಗಿ ಅರ್ಥೈಸಿಕೊಂಡರೇ? | |
| ವಿಷಯದ ವಿಸ್ತರಣೆ Expand | ಮಕ್ಕಳಿಂದ ಗಟ್ಟಿ ವಾಚನ:- ಶಿಕ್ಷಕರು ಸರದಿಯಂತೆ ಪ್ರತಿ ಮಗುವಿನಿಂದ ಪಾಠವನ್ನು ಓದಿಸುವರು . ತಪ್ಪಾದಲ್ಲಿ ತಿದ್ದಿ ಸೂಕ್ತ ಮಾರ್ಗದರ್ಶನ ನೀಡುವರು ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ಹಿರೇಮಣಿ ಸಹಾಯದಿಂದ ಸುಧಾರಿಸಲು ಪ್ರಯತ್ನಿಸುವರು ಮತ್ತು ತಾವೂ ಅವರೆಡೆಗೆ ಹೆಚ್ಚಿನ ಗಮನ ಹರಿಸುವರು. ಚಟುವಟಿಕೆ :- ಶಿಕ್ಷಕರು ಮಕ್ಕಳಿಗೆ ಈ ಕೆಳಗಿನ ಚಟುವಟಿಕೆಗಳನ್ನು ಮಾಡಲು ಮಾರ್ಗದರ್ಶನ ಸುವರು. (೧) ಸರಳ ಕಥೆಗಳು ಮಿಂಚು ಪಟ್ಟಿಗಳನ್ನು ಕೊಟ್ಟು ಗಟ್ಟಿಯಾಗಿ ಓದುವಂತೆ ಸೂಚಿಸುವರು. | ಪಠ್ಯಪುಸ್ತಕ.<br>ಕಥೆಗಳ ಮಿಂಚು ಪಟ್ಟಿ ನೋಟ್ ಪುಸ್ತಕ | ತಂತ್ರ:-ಗಟ್ಟಿ ಓದು.<br>ಸಾಧನ:-ವೈಯಕ್ತಿಕ ಓದು<br>ತಂತ್ರ :-ಓದು ಮತ್ತು ಬರಹ.<br>ಸಾಧನ :-ಕಥೆ ಓದು ಮತ್ತು ಟಿಪ್ಪಣಿ ಬರಹ | ಎಷ್ಟು ಮಕ್ಕಳು ಗಟ್ಟಿಯಾಗಿ ಓದುವಲ್ಲಿ ಅಸಮರ್ಥರಾಗಿದ್ದಾರೇ?<br>ಎಷ್ಟು ಮಕ್ಕಳು ಚಟುವಟಿಕೆಯನ್ನು ಸರಿಯಾಗಿ ಮಾಡಿದರು? | |

| | | | | | |
|---|---|---|---|---|---|
| | (೨) ಆರ್ ಕಲ್ಯಾಣಮ್ಮ ಮತ್ತು ಬಿಳಿಗೆರೆ ಸೀತಮ್ಮ ಬಗ್ಗಿದೆ ಟಿಪ್ಪಣಿ ಬರೆಯಲು ಸೂಚಿಸುವರು. | | | | |
| ೫) ಮೌಲ್ಯಮಾಪನ. Evaluation | ನಿಯೋಜಿತ ಕಾರ್ಯ /ಮೌಲ್ಯಮಾಪನ :- ಶಿಕ್ಷಕರು ವಿದ್ಯಾರ್ಥಿಗಳಿಗೆ ಅಭ್ಯಾಸ ಪುಸ್ತಕದಲ್ಲಿರುವ ಪ್ರಶ್ನೆಗಳಿಗೆ ಉತ್ತರ ಬರೆಯಲು ಸೂಚಿಸುವರು. | ಪಠ್ಯ ಪುಸ್ತಕ , ನೋಟ್ ಪುಸ್ತಕ | ತಂತ್ರ :-ಬರಹ. ಸಾಧನ:-ಪ್ರಶ್ನೆಗಳು | ನಾನು ನನ್ನ ಮುಂದಿನ ಪಾಠವನ್ನು ಹೇಗೆ ಆಯೋಜಿಸಲಿ ? | |

ಘಟಕದ ಹೆಸರು :-೯ ಅಮ್ಮ. ಘಟಕ ಯೋಜನೆ ಸಾಮರ್ಥ್ಯಗಳು:-ಪಠ್ಯದಲ್ಲಿನ ಸರಳ ಮಾಹಿತಿಯನ್ನು ಆಲಿಸಿ ಅರ್ಥೈಸಿಕೊಂಡು ಯಾರು ? ಯಾವಾಗ ? ಎಲ್ಲಿ ? ಎಂಬ ಪ್ರಶ್ನೆಗಳಿಗೆ ಉತ್ತರಿಸುವುದು .*ಓದುವುದು :-ಸರಳ ಪದ್ಯ ಮತ್ತು ಕಥೆಗಳನ್ನು ಗಟ್ಟಿಯಾಗಿ ಓದುವುದು. ವರ್ಗ:-೫.

ವಿಷಯ :- ಕನ್ನಡ. . ದಿನಾಂಕ:-

| ಕಲಿಕೆಯ ಹಂತಗಳು. | ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು. | ಭೋಧನಾ ಕಲಿಕೋಪಕರಣಗಳು | ಮೌಲ್ಯಮಾಪನದ ಸಾಧನ - ತಂತ್ರಗಳು | ಶಿಕ್ಷಕರ. ಸ್ವ-ಅವಲೋಕನ | ಅವಧಿ |
|---|---|---|---|---|---|
| ೧) ತೊಡಗಿಸಿಕೊಳ್ಳುವಿಕೆ Engage. | ಪೂರ್ವಸಿದ್ಧತೆ/ಪೂರಕ ಚಟುವಟಿಕೆ :- ಶಿಕ್ಷಕರು ವಿದ್ಯಾರ್ಥಿಗಳನ್ನು ವೃತ್ತಾಕಾರವಾಗಿ ಕೂಡ್ರಿಸಿ ತಾವು ಓದಿರುವ ಕಥೆ, ಹಾಡು, ಚುಟುಕು ಅಥವಾ ನಗೆ ಹನಿಗಳಲ್ಲಿ ಯಾವುದಾದರೊಂದನ್ನು ಹೇಳುವಂತೆ ಪ್ರೇರೇಪಿಸುವರು. | ಮಕ್ಕಳ ಭಾಗವಹಿಸುವಿಕೆ | ತಂತ್ರ :-ಅಭಿವ್ಯಕ್ತಿ. ಸಾಧನ :-ಕಥೆ, ಹಾಡು, ಚಟುವಟಿಕೆ | ಎಲ್ಲ ವಿದ್ಯಾರ್ಥಿಗಳ ಚಟುವಟಿಕೆಯೊಂದಿಗೆ ತೊಡಗಿಸಿಕೊಂಡಿದ್ದಾರೇ? | |

Sirsi Kannada Teachers group(www.studymanzil.com)

| | | | | | |
|---|---|---|---|---|---|
| ೨) ಪತ್ತೆ ಹಚ್ಚುವಿಕೆ Explore | ಶಿಕ್ಷಕರು ಮಕ್ಕಳಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು ೧) ನಿಮ್ಮ ಮನೆಯಲ್ಲಿ ಯಾರು ಯಾರು ಇದ್ದಾರೆ? (೨) ಮನೆಯಲ್ಲಿ ಯಾರನ್ನ ಕಂಡರೆ ನಿಮಗೆ ತುಂಬಾ ಇಷ್ಟ? (೩) ನಿಮಗೆ ಯಾರು ಊಟ ಹಾಕುತ್ತಾರೆ? (೪) ನಿಮಗೆ ಜನ್ಮ ಕೊಟ್ಟವಳನ್ನು ಏನೆಂದು ಕರೆಯುತ್ತೀರಿ? ಹಾಗಾದರೆ ಇಂದು ನಾವು "ಅಮ್ಮ"ಎಂಬ ಪದ್ಯವನ್ನು ಓದೋಣ. | ಪ್ರಶ್ನೆಗಳ ಬ್ಯಾಂಕ್ | ತಂತ್ರ:-ಅಭಿವ್ಯಕ್ತಿ. ಸಾಧನ:-ಮೌಖಿಕ ಪ್ರಶ್ನೆಗಳು. | ಈ ಚಟುವಟಿಕೆಯಲ್ಲಿ ಮಕ್ಕಳು ಆಸಕ್ತಿಯಿಂದ ಭಾಗವಹಿಸಿದ್ದಾರೇ? | |
| ೩) ವಿವರಣೆ/ವ್ಯಕ್ತಪಡಿಸುವಿಕೆ explain /express . | ಶಿಕ್ಷಕರ ಮಾದರಿ ವಾಚನ :- ನಿನ್ನ ನದಿಯ ಜೇನಿನಲಿ---------------ನಡೆದಾಡುವ ದೇವತೆ, ಈ ಮೇಲಿನ ಪದ್ಯವನ್ನು ಶಿಕ್ಷಕರು ಮಧುರವಾಗಿ ರಾಗ- ತಾಳ-ಲಯಬದ್ಧವಾಗಿ ಹಾಡಿ, ಮಕ್ಕಳಿಂದ ಹಾಡಿಸುವರು. ಹೊಸ ಪದಗಳ ಪರಿಚಯ :- ಶಿಕ್ಷಕರು ಈ ಕೆಳಗಿನ ಪದಗಳ ಅರ್ಥವನ್ನು ಕರಿಹಲಿಗೆಯ ಮೇಲೆ ಬರೆದು ಅರ್ಥೈಸುವರು. ಉದಾಹರಣೆಗೆ:- ಅನುರಾಗ-ಪ್ರೀತಿ, ನಭ-ಆಕಾಶ, ನೆಗೆ-ಹಾರು , ನುಡಿ-ಮಾತು ಆರಿಸಿ ಹುಡುಕಿ, ಊಟೆ -ನೀರಿನ ಚಿಲುಮೆ ಜಗದೊಡೆಯ-ಪರಮಾತ್ಮ. ವಿದ್ಯಾರ್ಥಿಗಳ ಮೌನ ಓದು :- ಶಿಕ್ಷಕರು ವಿದ್ಯಾರ್ಥಿಗಳಿಗೆ ಈ ಪದ್ಯವನ್ನು ಮೌನವಾಗಿ ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹುಡುಕುವಂತೆ ಪ್ರೇರೇಪಿಸುವರು. ೧) ಮಗುವಿನ ಮೊದಲ ಪಾಠಶಾಲೆ ಯಾವುದು ?(೨) ಕವಿ ಅಮ್ಮನನ್ನು ಏನೆಂದು ಕರೆದಿದ್ದಾರೆ? ಗ್ರಹಣ ಶಕ್ತಿಯ ಪರಿಶೀಲನೆ :- ಶಿಕ್ಷಕರು ಮಕ್ಕಳಿಗೆ ಪ್ರಶ್ನೋತ್ತರ ಪ್ರೀತಿಯ ಮುಖಾಂತರ ಪದ್ಯದ ಸಾರಾಂಶವನ್ನು ವಿವರಿಸುವರು, ಗುಂಪುಗಳಲ್ಲಿ ಪ್ರಶ್ನೆಗಳನ್ನು ಕೊಟ್ಟು ಪರಸ್ಪರ ಚರ್ಚಿಸಿ ಉತ್ತರಿಸುವಂತೆ ಸೂಚಿಸುವರು.೧) ತಾಯಿ ತನ್ನ ಮಗುವನ್ನು ಏನೆಂದು ಹರಸುತ್ತಾಳೆ? (೨) ಅಮ್ಮ ಯಾವುದಕ್ಕೆ ದಿಕ್ಸೂಚಿಯಾಗಿದ್ದಾಳೆ? ವ್ಯಾಕರಣ :- * ಶಿಕ್ಷಕರು ಮಕ್ಕಳಿಗೆ ಪದಗಳ ಉಚ್ಚಾರಣೆ ಹಾಗೂ ಅರ್ಥವ್ಯತ್ಯಾಸ ತಿಳಿಸುವರು. ಉದಾಹರಣೆ:-ಅರಸು- | ಪಠ್ಯಪುಸ್ತಕ<br>ಶಬ್ದಕೋಶ , ಕರಿಹಲಿಗೆ<br>ಪಠ್ಯಪುಸ್ತಕ<br>ಪಠ್ಯಪುಸ್ತಕ<br>ಪಠ್ಯಪುಸ್ತಕ , ಕರಿಹಲಿಗೆ | ಓದಿ ಗ್ರಹಿಸುವ ಕೌಶಲದ ಮೌಲ್ಯಮಾಪನ<br>ತಂತ್ರ :-ಬರಹ. ಸಾಧನ :-ಶಬ್ದಾರ್ಥಗಳು<br>ಓದಿ ಗ್ರಹಿಸುವ ಕೌಶಲದ ಮೌಲ್ಯಮಾಪನ<br>ತಂತ್ರ :-ಅವಲೋಕನ. ಸಾಧನ :-ಅವಲೋಕನ ಪಟ್ಟಿ.<br>ತಂತ್ರ:-ಬರಹ. ಸಾಧನ:-ಶಬ್ದಾರ್ಥಗಳು | ಎಲ್ಲ ಮಕ್ಕಳು ಶಿಕ್ಷಕರು ಹಾಡಿದಂತೆ ರಾಗಬದ್ಧವಾಗಿ ಹಾಡಿದರೆ ?<br>ಎಷ್ಟು ಮಕ್ಕಳು ಪದಗಳ ಅರ್ಥವನ್ನು ಅರ್ಥೈಸಿಕೊಳ್ಳುಲಲ್ಲಿ.<br>ಎಷ್ಟು ವಿದ್ಯಾರ್ಥಿಗಳು ಮೌನವಾಗಿ ಓದಲು ಸಮರ್ಥಿಸಿದ್ದಾರೆ?<br>ನಾನು ಹೇಳಿದ ವಿಷಯದ ಕುರಿತ ನನಗೆ ತೃಪ್ತಿ ಇದೆಯೇ?<br>ಎಲ್ಲಿ ಮಕ್ಕಳು ಪದಗಳ ಅರ್ಥ ವ್ಯತ್ಯಾಸ ಅರಿತರೇ? | |

Sirsi Kannada Teachers group(www.studymanzil.com)

| | | | | | |
|---|---|---|---|---|---|
| | ಹುಡುಕು . ಸಿರಿ-ಸಂಪತ್ತು, , ಹರಸು -ಆಶೀರ್ವದಿಸು , ಸೆರೆ -ಬಂಧನ ಇತ್ಯಾದಿ . . *ವಿರುದ್ಧ ಪದಗಳನ್ನು ಮಕ್ಕಳಿಂದಲೇ ಬರಿಸುವರು ತಪ್ಪಿದಲ್ಲಿ ತಿದ್ದುಪಡಿರು. | | | | |
| ವಿಷಯದ ವಿಸ್ತರಣೆ Expand | ಮಕ್ಕಳಿಂದ ಗಟ್ಟಿ ಓದು (ಗಾಯನ) :- ಈ ಪದ್ಯವನ್ನು ಸರದಿಯಂತೆ ಒಂದೊಂದು ಸಾಲುಗಳನ್ನು ಗದ್ಯ ರೂಪದಲ್ಲಿ ಓದಿಸುವುದು. ನಂತರ ಗುಂಪುಗಳಲ್ಲಿ ಪ್ರತಿ ಗುಂಪು ಒಂದೊಂದು ನುಡಿಯನ್ನು ಹಾಡುವುದು, ಚೆನ್ನಾಗಿ ಹಾಡಿದ ಗುಂಪಿಗೆ ಪ್ರಶಂಸಿಸುವುದು ನಂತರ ಪ್ರತಿಯೊಂದು ಗುಂಪು ಪೂರ್ಣ ಪದ್ಯವನ್ನು ಹಾಡುವುದು. ನಂತರ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಹಾಡಲು ರುಢಿಸುವುದು.<br>ಚಟುವಟಿಕೆ :-*ಮಕ್ಕಳನ್ನು 2 ತಂಡಗಳಲ್ಲಿ ಕೂಡ್ರಿಸಿ ಒಂದು ಗುಂಪು ಪೂರ್ವಕ ಪಾಠವನ್ನು ಒಂದೊಂದು ವಾಕ್ಯ ಓದುತ್ತಾ ಹೋಗುವುದು. ಎರಡನೇ ಗುಂಪು ವಾಕ್ಯ ಅರ್ಥವನ್ನು ಅವರ ಮಾತೃಭಾಷೆಯಲ್ಲಿ ವಿವರಿಸುವುದು. ಕೊನೆಯಲ್ಲಿ ಪೂರಕ ಓದಿಗೆ ಸಂಬಂಧಪಟ್ಟ ಚಿಕ್ಕ ಚಿಕ್ಕ ಪ್ರಶ್ನೆಗೆ ಉತ್ತರ ಪಡೆಯುವುದು.*ಪದಗಳನ್ನು ಕೊಟ್ಟು ಸ್ವಂತ ವಾಕ್ಯದಲ್ಲಿ ಬರೆಯಲು ಸೂಚಿಸುವುದು. | ಪಠ್ಯಪುಸ್ತಕ<br>ಪಠ್ಯಪುಸ್ತಕ<br>ನೋಟ್ ಪುಸ್ತಕ | ತಂತ್ರ:-ಓದುವುದು /ಹಾಡುವುದು. .<br>ಸಾಧನ:-ಪದ್ಯ.<br>ತಂತ್ರ :-ಓದು/ಅಭಿವ್ಯಕ್ತಿ.<br>ಸಾಧನ :-ಪದ್ಯ ಓದುವುದು ಮತ್ತು ಅದರ ಅರ್ಥ ವಿವರಿಸುವರು | ಎಷ್ಟು ವಿದ್ಯಾರ್ಥಿಗಳು ಗಟ್ಟಿಯಾಗಿ ಓದಲು ಸಮರ್ಥಿಸಿದ್ದಾರೇ?<br>ಮಕ್ಕಳ ಕೊಟ್ಟ ಚಟುವಟಿಕೆಯನ್ನು ಸರಿಯಾಗಿ ಮಾಡಿದ್ದಾರೇ? | |
